ಬೆಂಗಳೂರು ಸಂಪುಟ: 16 ಸಂಚಿಕೆ: 46 ಪುಟ: 06 ಗುರುವಾರ 09-01-2025

Mail:mussanje2010@gmail.com www.mussanjenews.com

# ಮುಸ್ಸಂಜೆ

ಪ್ರಭಾವಶಾಲಿ ಕನ್ನಡ ಸಂಜೆ ದಿನ ಪತ್ರಿಕೆ

Managing Editor: N.Veerendra Babu (MBA, LLB) Executive Editor: L P Babu Honourary Editor: Venkatesh



ಬೆತ್ತಲಾಗಿ ಸಂಕಷ್ಟಕ್ಕೆ ಸಿಲುಕಿದ ಡಿಮ್ರಿ

ಸಾಂಪ್ರದಾಯಿಕ ಉಡುಗೆಯಲ್ಲಿ ಫೋಟೋ ಶೂಟ್

2 ತಿಂಗಳು ರಜೆ ಹಾಕಿದ್ದೀನಿ ↘ ಪುಟ 6

## ಕಾಲ್ತುಳಿತ ಪ್ರಕರಣ: ಮೃತರ ಕುಟುಂಬಕ್ಕೆ ತಲಾ 25 ಲಕ್ಷ ರೂ. ಪರಿಹಾರ


# ವರದಿ ಕೇಳಿದ ಸಿಎಂ

**ಆಂಧ್ರಪ್ರದೇಶ:** ತಿರುಪತಿಯಲ್ಲಿ ನಡೆದ ಕಾಲ್ತುಳಿತ ಪ್ರಕರಣಕ್ಕೆ ಸಂಬಂಧಿಸಿದಂತೆ ಕಾರಣ ಕೇಳಿರುವ ಅಲ್ಲಿನ ಸರ್ಕಾರ ಕೂಡಲೇ ವರದಿ ನೀಡುವಂತೆ ಆಡಳಿತ ಮಂಡಳಿಗೆ ತಾಕೀತು ಮಾಡಿದೆ.

ಘಟನೆಯ ಮಾಹಿತಿ ಆಧರಿಸಿ ಗುರುವಾರ ತಿರುಪತಿಗೆ ಭೇಟಿ ನೀಡಿದ ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು ಅವರು, ಘಟನೆ ನಡೆಯಲು ಕಾರಣವೇನು? ಎಂಬುದರ ಬಗ್ಗೆ ಲಿಖಿತ ರೂಪದಲ್ಲಿ ಪೂರ್ಣ ವಿವರ ನೀಡುವಂತೆ ಆಡಳಿತ ಮಂಡಳಿಗೆ ಸೂಚನೆ ನೀಡಿದರು.

ಭದ್ರತಾ ವೈಫಲ್ಯವೇ? ಅಥವಾ ಟಿಕೆಟ್ ವಿತರಣೆಗೆ ಸಂಬಂಧಿಸಿದಂತೆ ಆಡಳಿತ ಮಂಡಳಿ ತೆಗೆದುಕೊಂಡ ಆತುರದ ನಿರ್ಧಾರವೇ? ಎಂಬುದರ ಬಗ್ಗೆ ಮಾಹಿತಿ ನೀಡಬೇಕು ಎಂದು ಸಿಎಂ ಹೇಳಿದರು.

ಆಡಳಿತ ಮಂಡಳಿ ಇನ್ನು ಮುಂದೆ ಇಂತಹ ನಿರ್ಲಕ್ಷಗಳು ನಡೆಯದಂತೆ ಎಚ್ಚರವಹಿಸಬೇಕು ಎಂದು ಕೂಡ ಇದೇ ವೇಳೆ ಅವರು ತಾಕೀತು ಮಾಡಿದರು.



ಘಟನೆಗೆ ಆಡಳಿತ ಮಂಡಳಿ ಮತ್ತು ಅಲ್ಲಿನ ಅಧಿಕಾರಿಗಳ ನಿರ್ಲಕ್ಷ್ಯವೇ ಕಾರಣ ಎಂದು ಆಕ್ರೋಶ ವ್ಯಕ್ತಪಡಿಸಿದ ಸಿಎಂ, ನಿಮ್ಮ ನಿರ್ಲಕ್ಷದಿಂದಾಗಿ ಇಂತಹ ಅನಾಹುತ ನಡೆದಿದೆ. ನಿಮ್ಮಿಂದ ಎಲ್ಲರಿಗೂ ಕೆಟ್ಟ ಹೆಸರು ಎಂದು ಹರಿಹಾಯ್ದರು.

ಏಕ ಕಾಲಕ್ಕೆ ಒಂದೇ ದ್ವಾರದಲ್ಲಿ ಸುಮಾರು 2000ಕ್ಕೂ ಹೆಚ್ಚು ಜನರನ್ನು ಬಿಟ್ಟಿದ್ದು ಏಕೆ? ಇಂತಹ ಬೇಜವಾಬ್ದಾರಿತನವೇ ಅವಘಡಕ್ಕೆ ಕಾರಣವಾಗಿದೆ ನನಗೆ ತಕ್ಷಣವೇ ವರದಿ ನೀಡಬೇಕು. ಇಂತಹದ್ದನ್ನು ಸರ್ಕಾರ ಸಹಿಸುವುದಿಲ್ಲ ಎಂದು ಗುಡುಗಿದರು.

ಕಾಲ್ತುಳಿತ ಪ್ರಕರಣದಲ್ಲಿ ನಿಧನರಾದ ಆರು ಮಂದಿ ಕುಟುಂಬಕ್ಕೆ ತಲಾ 25 ಲಕ್ಷ ರೂ. ಪರಿಹಾರ ಘೋಷಣೆ ಮಾಡಿದರು. ಕಾಲ್ತುಳಿತದಿಂದಾಗಿ ಅಸ್ವಸ್ಥಗೊಂಡಿರುವ ಭಕ್ತರ ಆರೋಗ್ಯದ ಬಗ್ಗೆ ಕಾಳಜಿ ವಹಿಸುವಂತೆ ಸ್ಥಳದಲ್ಲಿದ್ದ ಅಧಿಕಾರಿಗಳಿಗೆ ಸೂಚನೆ ಕೊಟ್ಟರು.

ಇಂತಹ ಸಂದರ್ಭದಲ್ಲಿ ಭಕ್ತರು ಕೂಡ ತಾಳ್ಮೆಯಿಂದ ಇರಬೇಕಾಗುತ್ತದೆ. ದೇವರ ದರ್ಶನವನ್ನು ಪಡೆಯಲು ಪ್ರತಿದಿನ ಅವಕಾಶ ಇದ್ದೇ ಇರುತ್ತದೆ. ಇದೇ ವೇಳೆ ದರ್ಶನ ಪಡೆಯಬೇಕು ಎಂಬ ಹಠವನ್ನು ಬಿಡಿ ಎಂದು ಚಂದ್ರಬಾಬು ನಾಯ್ಡು ಕಿವಿಮಾತು ಹೇಳಿದರು.

ಟಿಟಿಡಿ ಅಧ್ಯಕ್ಷ ಬಿಆರ್ ನಾಯ್ಡು ಮಾತನಾಡಿ, ನಮ್ಮ ನಿರ್ಲಕ್ಷ್ಯವೇ ಇದಕ್ಕೆ ಕಾರಣ, ಭದ್ರತಾ ವೈಫಲ್ಯದಿಂದಲೇ ಈ ಘಟನೆ ಸಂಭವಿಸಿದೆ ಎಂದು ತಪ್ಪು ಒಪ್ಪಿಕೊಂಡರು. ಬೇರೆಲ್ಲಾ ಕೌಂಟರ್‌ನಲ್ಲಿ ಪರಿಸ್ಥಿತಿ ಶಾಂತವಾಗಿತ್ತು. ಈ ಕೌಂಟರ್‌ನಲ್ಲಿ ಮಾತ್ರ 4-5 ಸಾವಿರ ಮಂದಿ ಒಟ್ಟುಗೂಡಿದ್ದರು. ಇದು ನಿಜಕ್ಕೂ ದುರದೃಷ್ಟಕರ ಎಂದರು.

ಟಿಡಿಪಿ ರಾಷ್ಟ್ರೀಯ ವಕ್ತಾರ ಪ್ರೇಮ್ ಕುಮಾರ್ ಜೈನ್ ಮಾತನಾಡಿ, "ಈ ಘಟನೆ ದುರದೃಷ್ಟಕರ. ಇಂಥ ಘಟನೆಗಳು ಮರುಕಳಿಸದಂತೆ ಎಲ್ಲ ಕ್ರಮಗಳನ್ನು ಕೈಗೊಳ್ಳಲಾಗುವುದು. ನಮ್ಮ ನಿರ್ಲಕ್ಷ್ಯವೇ ಇದಕ್ಕೆ ಕಾರಣ. ಗಾಯಾಳುಗಳ ಚಿಕಿತ್ಸೆಗೆ ನಮ್ಮ ಸರ್ಕಾರ ಎಲ್ಲಾ ಅಗತ್ಯ ಸಹಾಯ ನೀಡಲಿದೆ" ಎಂದು ಹೇಳಿದರು.



ತಮಿಳುನಾಡಿನ ಕುಂಭಕೋಣಂಗೆ ಗುರುವಾರ ಹೆಲಿಕಾಪ್ಟರ್ ನಲ್ಲಿ ಬಂದಿಳಿದ ಡಿಸಿಎಂ ಡಿ ಕೆ ಶಿವಕುಮಾರ್ ಅವರನ್ನು ಸ್ಥಳೀಯ ಮೇಯರ್ ಶರವಣನ್, ತಂಜಾವೂರು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಲೋಕನಾಥನ್, ಕಾಂಗ್ರೆಸ್ ಮುಖಂಡರಾದ ಕೃಷ್ಣಸ್ವಾಮಿ, ವೆಂಕಟೇಶ್ ಮತ್ತಿತರರು ಬರಮಾಡಿಕೊಂಡರು.

## ಆಕ್ಷೇಪಾರ್ಹ ಪದ ಬಳಕೆ: ಸಿ.ಟಿ ರವಿಗೆ ಸಿಐಡಿ ನೋಟಿಸ್

ಬೆಂಗಳೂರು: ಚಳಿಗಾಲದ ಅಧಿವೇಶನದ ವೇಳೆ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಬಗ್ಗೆ ಆಕ್ಷೇಪಾರ್ಹ ಪದ ಬಳಕೆ ಮಾಡಿದ ಪ್ರಕರಣಕ್ಕೆ ಸಂಬಂಧಿಸಿದಂತೆ ವಿಚಾರಣೆಗೆ ಹಾಜರಾಗುವಂತೆ ವಿಧಾನಪರಿಷತ್ ಸದಸ್ಯ ಸಿ.ಟಿ.ರವಿಗೆ ಸಿಐಡಿ ಪೊಲೀಸರು ನೋಟಿಸ್ ನೀಡಿದ್ದಾರೆ.

ಇಂದು ವಿಚಾರಣೆಗೆ ಹಾಜರಾಗುವಂತೆ ಎಂಎಲ್‌ಸಿ ಸಿ.ಟಿ ರವಿ ಅವರಿಗೆ ಸಿಐಡಿ ಪೊಲೀಸರು ನೋಟಿಸ್ ನೀಡಿದ್ದಾರೆ ಎಂಬ ಮಾಹಿತಿ ಲಭ್ಯವಾಗಿದೆ.

ಬೆಳಗಾವಿಯಲ್ಲಿ ನಡೆದ ಚಳಿಗಾಲದ ಅಧಿವೇಶನದ ವೇಳೆ ಸದನದಲ್ಲಿ ಪ್ರತಿಭಟನೆ ನಡೆಸುತ್ತಿದ್ದ ವೇಳೆ ಎಂಎಲ್ ಸಿ ಸಿ.ಟಿ.ರವಿ ಅವರು ಸಚಿವೆ ಲಕ್ಷ್ಮೀ ಹೆಬ್ಬಾಳಕರ್ ಬಗ್ಗೆ ಆಕ್ಷೇಪಾರ್ಹ ಪುಟ 2

## ಜಗತ್ತಿನ ಭವಿಷ್ಯ ಯುದ್ಧದಲ್ಲಿಲ್ಲ, ಬುದ್ಧನಲ್ಲಿದೆ



**ಭುವನೇಶ್ವರ್:** ವಿಶ್ವದಲ್ಲಿ ಖಡ್ಗದ ಬಲದಿಂದ ಸಾಮ್ರಾಜ್ಯ ವಿಸ್ತರಿಸುವ ಕಾಲವಿದ್ದಾಗ ನಮ್ಮ ಸಾಮ್ರಾಟ ಅಶೋಕ ಇಲ್ಲಿ ಶಾಂತಿ ಮಾರ್ಗವನ್ನು ಆರಿಸಿಕೊಂಡಿದ್ದರು. ಇದು ನಮ್ಮ ಪರಂಪರೆಯ ಶಕ್ತಿಯಾಗಿದ್ದು, ಅದರ ಸ್ಫೂರ್ತಿಯ ಕಾರಣ ಇಂದು ಜಗತ್ತಿನ ಭವಿಷ್ಯವು ಯುದ್ಧದಲ್ಲಿಲ್ಲ, ಬುದ್ಧನಲ್ಲಿದೆ ಎಂದು ಭಾರತ ಹೇಳಲು ಸಾಧ್ಯವಾಗಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದರು.

ಒಡಿಶಾದಲ್ಲಿ ಆಯೋಜಿಸಿರುವ 18ನೇ ಪ್ರವಾಸಿ ಭಾರತೀಯ ದಿವಸ್‌ಸಮ್ಮೇಳನದ ಉದ್ಘಾಟನಾ ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದ ಅವರು, ಇದು ರೋಮಾಂಚಕ ಹಬ್ಬಗಳ ಸಮಯ. ಇನ್ನು ಕೆಲವೇ ದಿನಗಳಲ್ಲಿ ಪ್ರಯಾಗ್‌ರಾಜ್‌ನಲ್ಲಿ ಮಹಾಕುಂಭ ಆರಂಭವಾಗಲಿದೆ. ಮಕರ ಸಂಕ್ರಾಂತಿ, ಬಿಹು, ಪೊಂಗಲ್, ಲೋಹ್ರಿಯಂತಹ ಹಬ್ಬಗಳು ಬರಲಿವೆ. ದೇಶದೆಲ್ಲೆಡೆ ಹರ್ಷದ ವಾತಾವರಣವಿದೆ ಎಂದರು.

ಇಂದು ನೀವು ಒಟ್ಟುಗೂಡಿರುವ ಒಡಿಶಾದ ಭವ್ಯ ಭೂಮಿ ಭಾರತದ ಶ್ರೀಮಂತ ಪರಂಪರೆಯ ಪ್ರತಿಬಿಂಬವಾಗಿದೆ. ಒಡಿಶಾದಲ್ಲಿ ಪ್ರತಿ ಹೆಜ್ಜೆಯಲ್ಲೂ ನಮ್ಮ ಪರಂಪರೆ ಗೋಚರಿಸುತ್ತದೆ. ನೂರಾರು ಪುಟ 2

## ಪ್ರತ್ಯೇಕ ರಸ್ತೆ ಅಪಘಾತ: 6 ಮಂದಿ ಬಲಿ

**ವೇಲೂರು:** ರಾಣಿಪೇಟೆ ಬಳಿ ಕೆಎಸ್‌ಆರ್‌ಟಿಸಿ ಬಸ್ ಹಾಗೂ ಕರ್ನಾಟಕದ ಕ್ಯಾಂಟರ್ ನಡುವೆ ನಿನ್ನೆ ರಾತ್ರಿ ಸಂಭವಿಸಿದ ಭೀಕರ ರಸ್ತೆ ಅಪಘಾತದಲ್ಲಿ ಕೋಲಾರದ ನಾಲ್ವರು ಮೃತಪಟ್ಟಿದ್ದಾರೆ.ಅಪಘಾತದ ರಭಸಕ್ಕೆ ಕ್ಯಾಂಟರ್‌ನಲ್ಲಿದ್ದ ಮೂವರು ಹಾಗೂ ಕೆಎಸ್‌ಆರ್‌ಟಿಸಿ ಬಸ್ ಚಾಲಕ ಮೃತಪಟ್ಟಿದ್ದಾರೆ. ಕೆಎಸ್‌ಆರ್‌ಟಿಸಿ ಬಸ್‌ನಲ್ಲಿದ್ದ ಓರ್ವ ಮಹಿಳೆ ಗಂಭೀರವಾಗಿ ಗಾಯಗೊಂಡಿದ್ದಾರೆ. ಕ್ಯಾಂಟರ್ ಚಾಲಕ ಮಂಜುನಾಥ್, ಕ್ಲೀನರ್ ಶಂಕರ್, ಸಹಾಯಕ ಸೋಮಶೇಖರ್, ವೆಂಕಟೇಶ್ ನಗರ ಗ್ರಾಮದ ರೈತ ಕೃಷ್ಣಪ್ಪ ಮೃತ ದುರ್ದೈವಿಗಳು ಎಂದು ಗುರುತಿಸಲಾಗಿದೆ. ನಲ್ಲೂರು ಗ್ರಾಮದ ಸರಸ್ವತಮ್ಮ ಸ್ಥಿತಿ ಗಂಭೀರವಾಗಿದೆ.ಮುಳಬಾಗಿಲು ತಾಲೂಕಿನ ನಲ್ಲೂರು ಗ್ರಾಮದ 50 ಮಂದಿ ಭಕ್ತರು ಕೆಎಸ್‌ಆರ್‌ಟಿಸಿ ಬಸ್‌ನಲ್ಲಿ ತಮಿಳುನಾಡಿನ ಮೇಲ್ಮರವತ್ತೂರು ಓಂ ಶಕ್ತಿ ದೇವಾಲಯಕ್ಕೆ ಪ್ರವಾಸ ಹೋಗಿ ವಾಪಸಾಗುತ್ತಿದ್ದರು. ಕ್ಯಾಂಟರ್ ಶ್ರೀನಿವಾಸಪುರ ತಾಲೂಕು ಸೀಗೆಹಳ್ಳಿ ಗ್ರಾಮದಿಂದ ಚೆನ್ನೈಗೆ ತರಕಾರಿ ತುಂಬಿಕೊಂಡು ರಾತ್ರಿ ಹೋಗುತ್ತಿದ್ದಾಗ ಮಾರ್ಗ ಮಧ್ಯದ ತಮಿಳುನಾಡಿನ ರಾಣಿಪೇಟೆ ಬಳಿ ಅಪಘಾತ ಸಂಭವಿಸಿದೆ. ನಾಲ್ವರು ಮೃತಪಟ್ಟಿದ್ದಾರೆ. ನಲ್ಲೂರು ಗ್ರಾಮದ ಸರಸ್ವತಮ್ಮ, ನಾಗೇಶ್, ಮುನಿರತ್ನಮ್ಮ ಮುನಿರತ್ನಮ್ಮ, ಚರಣ್, ಮುನಿನಾರಾಯಣಪ್ಪ ಸ್ಥಿತಿ ಗಂಭೀರವಾಗಿದೆ. ಗಾಯಾಳುಗಳನ್ನು ವೇಲೂರಿನ ಮೆಡಿಕಲ್ ಕಾಲೇಜ್ ಆಸ್ಪತ್ರೆ, ವಾಲಾಜ ಸಿಎಂಸಿ ಆಸ್ಪತ್ರೆ ಮತ್ತು ರತ್ನಗಿರಿ ಮೆಡಿಕಲ್ ಕಾಲೇಜಿನ ಮೆಡಿಕಲ್ ಕಾಲೇಜ್ ಆಸ್ಪತ್ರೆಗಳಲ್ಲಿ ದಾಖಲು ಮಾಡಿ ಚಿಕಿತ್ಸೆ ನೀಡಲಾಗುತ್ತಿದೆ ಬಸ್ ನಲ್ಲಿ 50 ಒಟ್ಟು ಜನರಲ್ಲಿ 8 ಜನರು ಪುಟ 2

## ಪ್ರವಾಸೋದ್ಯಮ, ಕೃಷಿ, ಕೈಗಾರಿಕೆ ಕ್ಷೇತ್ರಗಳಿಗೆ ಅನುಕೂಲ



**ನವದೆಹಲಿ:** ಐತಿಹಾಸಿಕ ಪ್ರವಾಸಿ ತಾಣ ಶ್ರೀರಂಗಪಟ್ಟಣ - ಅರಸಿಕೆರೆ ನಡುವಿನ ರಾಜ್ಯ ಹೆದ್ದಾರಿ 7 ಅನ್ನು ರಾಷ್ಟ್ರೀಯ ಹೆದ್ದಾರಿಯನ್ನಾಗಿ ಮೇಲ್ದರ್ಜೆಗೇರಿಸುವ ಯೋಜನೆಗೆ ಕೇಂದ್ರ ಹೆದ್ದಾರಿ ಮತ್ತು ಭೂಸಾರಿಗೆ ಸಚಿವ ನಿತಿನ್ ಗಡ್ಕರಿ ಅವರು ಒಪ್ಪಿಗೆ ನೀಡಿದ್ದಾರೆ. ಕೆ ಆರ್ ಪೇಟೆ ಶಾಸಕ ಹೆಚ್.ಟಿ. ಮಂಜುನಾಥ್ ಅವರ ಮನವಿ ಮೇರೆಗೆ ಗಡ್ಕರಿ ಅವರನ್ನು ನವದೆಹಲಿಯಲ್ಲಿ ಭೇಟಿಯಾಗಿದ್ದ ಮಂಡ್ಯ ಸಂಸದರು ಆಗಿರುವ ಕೇಂದ್ರದ ಬೃಹತ್ ಕೈಗಾರಿಕೆ ಮತ್ತು ಉಕ್ಕು ಖಾತೆ ಸಚಿವ ಹೆಚ್.ಡಿ.ಕುಮಾರಸ್ವಾಮಿ ಪುಟ 2

## ನಿಮ್ಹಾನ್ಸ್‌ನಲ್ಲಿ ಆಡಳಿತ ಸೇವೆಯ ಅಧಿಕಾರಿಯ ನೇಮಕಾತಿಗೆ ಕ್ರಮ: ಸಿ.ಎಂ ಸೂಚನೆ

ಬೆಂಗಳೂರು: ರಾಜೀವ್ ಗಾಂಧಿ ವೈದ್ಯಕೀಯ ವಿವಿಯಲ್ಲಿ ಹೆಚ್ಚುವರಿಯಾಗಿ ಸಂಗ್ರಹವಾಗಿರುವ ಮೊತ್ತವನ್ನು ಸರ್ಕಾರಿ ವೈದ್ಯಕೀಯ ಕಾಲೇಜುಗಳ ಮೂಲಸೌಲಭ್ಯಗಳಿಗಾಗಿ ಒದಗಿಸಲು ಮತ್ತು ನಿಮ್ಹಾನ್ಸ್‌ನಲ್ಲಿ ಕರ್ನಾಟಕ ಆಡಳಿತ ಸೇವೆಯ ಅಧಿಕಾರಿಯ ನೇಮಕಾತಿಗೆ ಕ್ರಮ ಕೈಗೊಳ್ಳಲು ವೈದ್ಯಕೀಯ ಶಿಕ್ಷಣ ಸಚಿವ ಶರಣಪ್ರಕಾಶ್ ಪಾಟೀಲ್ ಅವರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸೂಚನೆ ನೀಡಿದರು. ಕೃಷ್ಣಾದಲ್ಲಿ ನಡೆದ ವೈದ್ಯಕೀಯ ಶಿಕ್ಷಣ ಇಲಾಖೆಯ ಪ್ರಗತಿ ಪರಿಶೀಲನೆ ಸಭೆಯಲ್ಲಿ ಈ ಸೂಚನೆ ನೀಡಿದರು. ಪ್ರಸ್ತುತ ಸಾಲಿನಲ್ಲಿ ವೈದ್ಯಕೀಯ ಕಾಲೇಜುಗಳ ನಿರ್ಮಾಣ ಮತ್ತು ಉಪಕರಣಗಳ ಖರೀದಿಗೆ ರೂ.400 ಕೋಟಿ ಹಾಗೂ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗಳ ನಿರ್ಮಾಣಕ್ಕಾಗಿ ರೂ.130 ಪುಟ 2



## ಉಗ್ರ ಸ್ವರೂಪಿಣಿ ಪ್ರತ್ಯಂಗಿರಾ ದೇವಿ ದರ್ಶನ ಪಡೆದ ಡಿಕೆಶಿ



**ಬೆಂಗಳೂರು:** ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಇಂದು ಬೆಳಿಗ್ಗೆ ತಮಿಳುನಾಡಿನ ಕುಂಭಕೋಣಂಗೆ ತೆರಳಿ ಪ್ರತ್ಯಂಕರ ಹೋಮದಲ್ಲಿ ಭಾಗಿಯಾಗಿದ್ದಾರೆ. ಪತ್ನಿ ಉಷಾ ಅವರೊಂದಿಗೆ ತೆರಳಿದ ಡಿ.ಕೆ.ಶಿವಕುಮಾರ್ ಶ್ರೀ ಮಹಾ ಪ್ರತ್ಯಂಗಿರ ದೇವಿ ದೇವಸ್ಥಾನದಲ್ಲಿ ವಿಶೇಷ ಪೂಜೆ ಹಾಗೂ ಹೋಮ ಚಟುವಟಿಕೆಯಲ್ಲಿ ಭಾಗವಹಿಸಿದ್ದರು. ವೈಕುಂಠ ಏಕಾದಶಿಗೂ ಮುನ್ನ ಡಿ.ಕೆ.ಶಿವಕುಮಾರ್ ದೇವಸ್ಥಾನಗಳ ದರ್ಶನಕ್ಕೆ ತೆರಳಿರುವುದು ಕುತೂಹಲ ಕೆರಳಿಸಿದೆ. ಇತ್ತೀಚೆಗೆ ರಾಜ್ಯ ರಾಜಕಾರಣದಲ್ಲಿ ನಾನಾ ರೀತಿಯ ಚಟುವಟಿಕೆಗಳು ನಡೆಯುತ್ತಿವೆ. ಅದರ ನಡುವೆ ಡಿ.ಕೆ.ಶಿವಕುಮಾರ್ ದೇವರ ಮೊರೆ ಹೋಗಿದ್ದಾರೆ.ತಮಿಳುನಾಡಿನಲ್ಲಿ ಡಿ.ಕೆ.ಶಿವಕುಮಾರ್ ಅವರನ್ನು ಸ್ಥಳೀಯ ಮೇಯರ್ ಶರವಣನ್, ತಾಂಜಾವೂರು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಲೋಕನಾಥನ್, ಕಾಂಗ್ರೆಸ್ ಮುಖಂಡ ಕೃಷ್ಣಸ್ವಾಮಿ, ವೆಂಕಟೇಶ್ ಮತ್ತಿತರರು ಬರಮಾಡಿಕೊಂಡರು. ಇದೇ ವೇಳೆ ಸುದ್ದಿಗಾರರೊಂದಿಗೆ ಮಾತನಾಡಿರುವ ಡಿ.ಕೆ.ಶಿವಕುಮಾರ್, ಕೇಂದ್ರ ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರ ಬಿಜೆಪಿಯೇತರ ಆಡಳಿತ ಇರುವ ರಾಜ್ಯಸರ್ಕಾರಗಳಿಗೆ ಸಮರ್ಪಕವಾದ ಅನುದಾನ ನೀಡುತ್ತಿಲ್ಲ. ತೆರಿಗೆ ಹಂಚಿಕೆಯಲ್ಲೂ ಅನ್ಯಾಯಮಾಡುತ್ತಿದೆ ಎಂದು ಕಿಡಿಕಾರಿದರು.

## ರಾಹುಲ್‌ಗಾಂಧಿಗಿಂತ ಪ್ರಿಯಾಂಕಾ ಬೆಸ್ಟ್

**ನವದೆಹಲಿ:** ಸಂಸದೆ ಪ್ರಿಯಾಂಕಾ ಗಾಂಧಿ ತನ್ನ ಸಹೋದರ ರಾಹುಲ್ ಗಾಂಧಿ ಅವರಂತೆ ಅಲ್ಲ. ಅವರು ಅತ್ಯಂತ ಸಂವೇದನಾಶೀಲರು ಎಂದು ಬಿಜೆಪಿ ಸಂಸದೆ ಕಂಗನಾ ರಣಾವತ್ ಶ್ಲಾಘಿಸಿದ್ದಾರೆ. ಮಾಜಿ ಪ್ರಧಾನಿ



ಇಂದಿರಾ ಗಾಂಧಿಯವರ ಜೀವನಾಧಾರಿತ ಮುಂಬರುವ ಚಿತ್ರ ಎಮರ್ಜೆನ್ಸಿ ವೀಕ್ಷಿಸಲು ನಟಿ ಮತ್ತು ಬಿಜೆಪಿ ಸಂಸದೆ ಕಂಗನಾ ರಣಾವತ್ ಅವರು ಕಾಂಗ್ರೆಸ್‌ನ ರಾಹುಲ್ ಗಾಂಧಿ ಅವರನ್ನು ಆಹ್ವಾನಿಸಿದ್ದಾರೆ. ಕಾಂಗ್ರೆಸ್ ಸಂಸದೆ ಪ್ರಿಯಾಂಕಾ ಗಾಂಧಿ ಅವರಿಗೂ ಇದೇ ರೀತಿಯ ಆಹ್ವಾನವನ್ನು ನೀಡಿದ್ದಾರೆ. ಜನವರಿ 17 ರಂದು ತೆರೆಗೆ ಬರಲಿರುವ ಈ ಚಿತ್ರವನ್ನು ರಣಾವತ್ ನಿರ್ದೇಶಿಸಿದ್ದು, ಅವರು ಮಾಜಿ ಪ್ರಧಾನಿ ಪಾತ್ರವನ್ನು ಸಹ ನಿರ್ವಹಿಸಿದ್ದಾರೆ. ಆದರೆ, ಆಹ್ವಾನ ನೀಡಲು ರಾಹುಲ್ ಗಾಂಧಿ ಅವರನ್ನು ಭೇಟಿಯಾದಾಗ ಕಂಗನಾ ಅವರ ವರ್ತನೆಯನ್ನು ಟೀಕಿಸಿದ್ದಾರೆ. ಪುಟ 2

# ಮುಖಂಡರು ಸರಿಯಾಗಿ ಕೆಲಸ ಮಾಡಿ: ರಾಜೀವ್‌ಗೌಡ



**ಶಿಡ್ಲಘಟ್ಟ:** ಶಿಡ್ಲಘಟ್ಟ ವಿದಾನಸಭಾ ಕ್ಷೇತ್ರವು ಕಾಂಗ್ರೆಸ್‌ನ ಭದ್ರಕೋಟೆ. ಇಲ್ಲಿ ನಾಯಕರಿಗೆ ಕೊರತೆಯಿಲ್ಲ ಆದರೆ ಕೆಲ ಮುಖಂಡರು ಸರಿಯಾಗಿ ಕೆಲಸ ಮಾಡದೇ ತಾಲ್ಲೂಕು ಮಟ್ಟದ ನಾಯಕರತ್ತ ಬೊಟ್ಟು ಮಾಡುವುದು ಸರಿಯಲ್ಲ. ಅದನು ಬಿಟ್ಟು ನಿಮ್ಮ ಕೆಲಸ ನೀವು ಮಾಡಿ ಗೆಲುವು ಯಾಕೆ ಸಿಗುವುದಿಲ್ಲ ನೋಡೋಣ ಎಂದು ಕೆಪಿಸಿಸಿ ಸಂಯೋಜಕರಾದ ರಾಜೀವ್‌ಗೌಡ ತಿಳಿಸಿದರು.

ಪಿಎಲ್‌ಡಿ ಬ್ಯಾಂಕ್‌ಗೆ ಚುನಾವಣೆ ಘೋಷಣೆಯಾದ ಹಿನ್ನಲೆಯಲ್ಲಿ ನಗರದ ಕಾಂಗ್ರೆಸ್ ಭವನದಲ್ಲಿ ಕರೆದಿದ್ದ ಆಕಾಂಕ್ಷಿ ಅಭ್ಯರ್ಥಿಗಳು, ಕಾಂಗ್ರೆಸ್ ಮುಖಂಡರು ಹಾಗೂ ಕಾರ್ಯಕರ್ತರ ಸಭೆಯಲ್ಲಿ ಮಾತನಾಡಿದರು.

ಪಿಎಲ್‌ಡಿ ಬ್ಯಾಂಕ್‌ನ ನಿರ್ದೇಶಕರುಗಳ ಸ್ಥಾನಗಳಿಗೆ ಚುನಾವಣೆ ನಿಗಯಾಗಿದ್ದು ನಾವೆಲ್ಲರೂ ಒಗ್ಗಟ್ಟಿನಿಂದ ಕೆಲಸ ಮಾಡಿ ಕಾಂಗ್ರೆಸ್ ಪಕ್ಷ ಮತ್ತು ರಾಜ್ಯದಲ್ಲಿನ ಕಾಂಗ್ರೆಸ್ ಸರ್ಕಾರದ ಸಾಧನೆಗಳನ್ನು ಮತದಾರರಿಗೆ ಮನವರಿಕೆ ಮಾಡಿಕೊಟ್ಟು ಎಲ್ಲಾ ಸ್ಥಾನಗಳನ್ನೂ ಗೆಲ್ಲುವಂತಾಗಬೇಕು ಎಂದರು.

ಕಳೆದ ಪಿಎಲ್‌ಡಿ ಬ್ಯಾಂಕ್ ಚುನಾವಣೆಯಲ್ಲಿ ನಮ್ಮದೇ ಸಣ್ಣದೊಂದು ಎಡವಟ್ಟಿನಿಂದ ನಾವು ಅಧಿಕಾರ ಹಿಡಿಯುವುದರಲ್ಲಿ ವಂಚಿತರಾದೆವು ಆ ತಪ್ಪುಗಳನ್ನು ತಿದ್ದಿಕೊಂಡು ಈ ಸಲ ಸಮರ್ಥವಾಗಿ ಚುನಾವಣೆಯನ್ನು ಎದುರಿಸೋಣ, ಗೆಲುವು ನಮ್ಮದಾಗುವುದರಲ್ಲಿ ಅನುಮಾನವಿಲ್ಲ ಎಂದು ಆಶಾಭಾವನೆ ವ್ಯಕ್ತಪಡಿಸಿದರು.

ಇತ್ತೀಚೆಗೆ ನಡೆದ 4 ಗ್ರಾಮ ಪಂಚಾಯಿತಿಗಳಲ್ಲಿ ನಮಗೆ ನಿರೀಕ್ಷಿತ ಗೆಲುವು ಸಿಗಲಿಲ್ಲ ಸೋತಿದ್ದೇವೆ ನಿಜ ಸೋಲೆ ಗೆಲುವಿನ ಮೆಟ್ಟಿಲುಗಳನ್ನಾಗಿ ಮಾಡಿಕೊಂಡು ಮುಂದಕ್ಕೆ ಹೋಗುವ ಪ್ರಯತ್ನ ಮಾಡಬೇಕು, 4 ಗ್ರಾಮ ಪಂಚಾಯಿತಿಗಳ ಸೋಲು ಗೆಲುವು ನಮ್ಮ ಅಳಿವು ಉಳುವಿನ ಪ್ರಶ್ನೆ ಆಗಲಾರದು, ಇನ್ನೂ 30 ಗ್ರಾಮ ಪಂಚಾಯಿತಿಗಳಿಗೆ ಮುಂದಿನ ದಿನಗಳಲ್ಲಿ ಚುನಾವಣೆ ನಡೆಯಲಿದ್ದು ಅದರತ್ತ ನಮ್ಮ ಶಕ್ತಿ ಪ್ರದರ್ಶನ ಮಾಡಬೇಕಿದೆ ಎಂದು ಕಿವಿಮಾತು ಹೇಳಿದರು.

ಕಳೆದ ಲೋಕಸಭೆ ಚುನಾವಣೆಯಲ್ಲಿ ಇಡೀ ಲೋಕಸಭೆ ಕ್ಷೇತ್ರದಲ್ಲೆ ಶಿಡ್ಲಘಟ್ಟ ವಿಧಾನಸಭಾ ಕ್ಷೇತ್ರದಲ್ಲೆ ಅತಿ ಹೆಚ್ಚು ಮತಗಳನ್ನು ನಮ್ಮ ಪಕ್ಷದ ಅಭ್ಯರ್ಥಿಗೆ ಬಿದ್ದಿದ್ದವು ಎಂದರೆ ಇಲ್ಲಿ ಕಾಂಗ್ರೆಸ್ ಪಕ್ಷದ ತಾಕತ್ತು, ಕಾರ್ಯಕರ್ತರ ಶಕ್ತಿ ಎಷ್ಟಿದೆ, ಅದನ್ನು ನಾವು ಮುಖಂಡರು ಉಳಿಸಿಕೊಳ್ಳುವ ಕೆಲಸ ಮಾಡಬೇಕಿದೆ ಎಂದು ನುಡಿದರು.

ಕ್ಷೇತ್ರವಾರು ಆಸಕ್ತಿ ಇರುವ ಅಭ್ಯರ್ಥಿಗಳು ತಮ್ಮ ತಮ್ಮ ಇಚ್ಚೆಯನ್ನು ಇಲ್ಲಿ ವ್ಯಕ್ತಪಡಿಸಿ,ಸಭೆಗೆ ಬಾರದ ಮುಖಂಡರ ಜತೆಗೂ ನಾನು ಮಾತನಾಡಿ ಅಂತಿಮವಾಗಿ ಅಭ್ಯರ್ಥಿಗಳನ್ನು ಆಯ್ಕೆ ಮಾಡೋಣ ಎಂದು ಸಭೆಯಲ್ಲಿ ಹೇಳಿದರು.

ಪಿಎಲ್‌ಡಿ ಬ್ಯಾಂಕ್‌ನ ಚುನಾವಣೆಗೆ ಸ್ಪರ್ಧಿಸುವ ಆಕಾಂಕ್ಷಿಗಳು ಚುನಾವಣೆಯನ್ನು ಎದುರಿಸುವ ಬಗ್ಗೆ ಸಭೆಯಲ್ಲಿ ತಮ್ಮ ತಮ್ಮ ಅನಿಸಿಕೆಗಳನ್ನು ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಕೋಚಿಮುಲ್ ಮಾಜಿ ಅಧ್ಯಕ್ಷ ಕೆ.ಗುಡಿಯಪ್ಪ, ನಿರ್ದೇಶಕರಾದ ಆರ್.ಶ್ರೀನಿವಾಸ್‌ರಾಮಯ್ಯ, ಪಿಎಲ್‌ಡಿ ಬ್ಯಾಂಕ್ ನಿರ್ದೇಶಕ ಕೆ.ಭೀಮೇಶ್, ದೊಗರನಾಯಕನಹಳ್ಳಿ ವೆಂಕಟೇಶ್, ಮಾದೇನಹಳ್ಳಿ ರವಿ,ಹೀರೇಬಲ್ಲ ರವಿ.ಎನ್. ಅಪ್ಸರ್‌ಪಾಷ,, ಟಿ.ಕೆ.ನಟರಾಜ್, ಎನ್. ಮುನಿಯಪ್ಪ, ತನ್ನು, ಡಿ.ಪಿ.ನಾಗರಾಜ್, ಸಾದಲಿ ಗೋವಿಂದರಾಜು, ತಿಮ್ಮನಾಯಕನಹಳ್ಳಿ ಆನಂದ್, ಶಮೀವುಲ್ಲಾ ಇನ್ನಿತರೆ ಕಾಂಗ್ರೆಸ್ ಮುಖಂಡರು ಹಾಜರಿದ್ದರು.

# ಕೃಷಿಕ ಸಮಾಜಕ್ಕೆ ಅವಿರೋಧ ಆಯ್ಕೆ



**ಚೇಳೂರು:** ಚೇಳೂರು ತಾಲ್ಲೂಕು ಕೃಷಿಕ ಸಮಾಜದ 2025–26 ರಿಂದ 2029–30 ರ ಸಾಲಿನ ಐದು ವರ್ಷಗಳ ಅವಧಿಗೆ ಕಾರ್ಯಕಾರಿ ಸಮಿತಿ ಸದಸ್ಯರು ಅವಿರೋಧ ಆಯ್ಕೆಯಾಗಿದ್ದಾರೆಂದು ಚುನಾವಣಾಧಿಕಾ. ಕೃಷಿ ಇಲಾಖೆಯ ಅಧಿಕಾರಿ ನಾರಾಯಣರೆಡ್ಡಿ ತಿಳಿಸಿದರು.

2025–2030 ರ ಸಾಲಿನ5 ವರ್ಷಗಳ ಅವಧಿಗೆ ಕೃಷಿಕ ಸಮಾಜದ ಕಾರ್ಯಕಾರಿ ಸಮಿತಿಯ ಅದ್ಯಕ್ಷರಾಗಿ ಹೊಸಹುಡ್ಯ ವಿ.ಶಿವಾರೆಡ್ಡಿ ಜಿಲ್ಲಾ ಪ್ರತಿನಿಧಿಯಾಗಿ ಬೈರಪ್ಪನಹಳ್ಳಿ ಜಯರಾಮರೆಡ್ಡಿ. ಪ್ರಧಾನ ಕಾರ್ಯದಶಿಯಾಗಿ ಪೇಪರ್‌ಜೆ.ವಿ.ಚಲಪತಿ. ಉಪಾದ್ಯಕ್ಷರಾಗಿ ರಾಮೋಜಿಪಲ್ಲಿ ಎಸ್.ಮಾಕಿರೆಡ್ಡಿ. ಖಜಾಂಚಿಯಾಗಿ ಬಿ.ಚಿ.ವೆಂಕಟರೆಡ್ಡಿ ನಿರ್ದೇಶಕರಾಗಿ ಎನ್.ವೆಂಕಟರಮಣ. ಕೆ.ವಿ.ವೆಂಕಟರವಣಪ್ಪ ಪಿ.ವಿ.ಕೃಷ್ಣಪ್ಪ. ಕೆ.ವಿ.ನಾರಾಯಣಸ್ವಾಮಿ. ಎಲ್. ವೆಂಕಟರವಣ. ಆಯ್ಕೆಯಾಗಿದ್ದಾರೆ.

ಈ ಸಂಧರ್ಭದಲ್ಲಿ ನೂತನ ಅದ್ಯಕ್ಷರು ವಿ.ಶಿವಾರೆಡ್ಡಿ ಮಾತನಾಡಿ ಕೃಷಿ ಇಲಾಖೆಯಿಂದ ರೈತಾಪಿ ಜನರಿಗೆ ಸಿಗುವ ಸಾಲ ಸೌಲಭ್ಯಗಳು ಕೃಷಿ ಪರಿಕರಗಳನ್ನು ಸಬ್ಸಿಡಿ ರೀತಿಯಲ್ಲಿ ಕೊಡಿಸಲಾಗುವುದು ಕಟ್ಟ ಕಡೆಯ ವ್ಯಕ್ತಿಗೂ ಸರಕಾರದ ಸವಲತ್ತು ಮುಟ್ಟುವ ಹಾಗೇ ಮಾಡುತ್ತೇನೆಂದರು.

ಈ ಆಯ್ಕೆ ಸಮಯದಲ್ಲಿ ಚೇಳೂರು ತಾ. ಹೋರಾಟ ಸಮಿತಿ ಸದಸ್ಯರಾದ ಗುನ್ನಾ ಪಾಪರೆಡ್ಡಿ ಪ್ರಹತಿಪರ ರೈತ ಮುಖಂಡರಾದ ಸಿ.ವಿ.ವೆಂಕಟರಮಣ ಪಟ್ಟೆಂ ಶಂಕರಪ್ಪ ಮತ್ತಿತರರು ಹಾಜರಿದ್ದರು.

# ನಗರಸಭೆಪೌರಾಯುಕ್ತರನ್ನುವರ್ಗಾವಣೆ ಮಾಡದಿದ್ದರೆ ಹೋರಾಟದ ಎಚ್ಚರಿಕೆ



**ಚಾಮರಾಜನಗರ:** ಇಲ್ಲಿನ ನಗರಸಭೆ ಪೌರಾಯುಕ್ತ ಎಸ್.ವಿ.ರಾಮದಾಸ್ ರವರನ್ನು ಕೂಡಲೇ ವರ್ಗಾವಣೆ ಮಾಡ ಬೇಕು, ಇಲ್ಲದಿದ್ದರೆ ಮುಂದಿನ ದಿನಗಳಲ್ಲಿ ಉಗ್ರ ಹೋರಾಟ ಮಾಡುವುದಾಗಿ ಕರ್ನಾಟಕ ರಕ್ಷಣಾ ವೇದಿಕೆ ಸ್ವಾಭಿಮಾನಿ ಸೇನೆಯ ಜಿಲ್ಲಾಧ್ಯಕ್ಷ ನವೀನ್ ಕುಮಾರ್ ಚಾಮರಾಜನಗರದಲ್ಲಿ ಎಚ್ಚರಿಸಿದರು.

ಕೆಲ ತಿಂಗಳ ಹಿಂದೆ ಚಾಮರಾಜನಗರ ಜಿಲ್ಲಾಡಳಿತ ಭವನದ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ನಡೆದ ಸಭೆಯಲ್ಲಿ ನಗರಾಭಿವೃದ್ಧಿ ಸಚಿವ ಬೈರತಿ ಸುರೇಶ್ ರವರು ನಗರಸಭೆ ಪೌರಾಯುಕ್ತ ಎಸ್.ವಿ. ರಾಮದಾಸ್ ರವರ ಕಾರ್ಯವೈಖರಿ ಬಗ್ಗೆ ಬೇಸರ ವ್ಯಕ್ತಪಡಿಸಿ, ವರ್ಗಾವಣೆಗೆ ಮೌಖಿಕವಾಗಿ ಆದೇಶಿಸಿದ್ದರು. ಆದರೆ, ಇಲ್ಲಿಯ ತನಕ ವರ್ಗಾವಣೆಯಾಗಿಲ್ಲ. ಈ ಸಂಬಂಧ ಜಿಲ್ಲಾಧಿಕಾರಿಗಳಿಗೆ ಹಾಗೂ ಸ್ಥಳೀಯ ಶಾಸಕ ಸಿ.ಪುಟ್ಟರಂಗಶೆಟ್ಟಿ ರವರಿಗೂ ಪತ್ರ ಬರೆಯಲಾಗಿದೆ ಎಂದು ಸುದ್ದಿಗೋಷ್ಟಿಯಲ್ಲಿ ತಿಳಿಸಿದರು.

ಪೌರಾಯುಕ್ತ ರಾಮದಾಸ್ ಬಂದ ಬಳಿಕ ನಗರದಲ್ಲಿ ಅಭಿವೃದ್ಧಿಯಾಗಿಲ್ಲ. ಪೌರಾಯುಕ್ತರ ವರ್ಗಾವಣೆ ಮಾಡುವಲ್ಲಿ ಸ್ಥಳೀಯ ಶಾಸಕರು ಜಾಣ ಕುರುಡುತನ ತೋರಿಸುತ್ತಿದ್ದಾರೆ. ಜಿಲ್ಲಾಧಿಕಾರಿಗೆ ಹಲವು ಬಾರಿ ದೂರು ನೀಡಿದ್ದರೂ ಯಾವುದೇ ಕ್ರಮವಹಿಸದೇ ನಿರ್ಲಕ್ಷ್ಯ ಮಾಡಿದ್ದಾರೆ ಎಂದರು.

ಸೇನೆಯ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮಂಜುನಾಯಕ್ ಮಾತನಾಡಿ, ರಾಮದಾಸ್ ರವರು ಮಾಡಿರುವ ಭ್ರಷ್ಟಚಾರದ ಬಗ್ಗೆ ಸೂಕ್ತ ತನಿಖೆ ನಡೆಸಿ ಕ್ರಮ ಜರುಗಿಸಬೇಕು. ರಾಮದಾಸ್ ಅವರನ್ನು ವರ್ಗಾವಣೆ ಮಾಡದಿದ್ದರೆ ಸಚಿವರು, ಶಾಸಕರ ಮೇಲೆ ಜನರಿಗೆ ನಂಬಿಕೆ ಉಳಿಯುವುದಿಲ್ಲ ಎಂದು ಹೇಳಿದರು.

ಸುದ್ದಿಗೋಷ್ಟಿಯಲ್ಲಿ ಸೇನೆಯ ಯುವ ಘಟಕದ ತಾಲೂಕು ಅಧ್ಯಕ್ಷ ಶಿವಕುಮಾರ್, ತಾಲೂಕು ಪ್ರಧಾನ ಕಾರ್ಯದರ್ಶಿ ದೀಪಕ್, ಉಪಾಧ್ಯಕ್ಷರಾದ ದರ್ಶನ್, ಪವನ್ ಇದ್ದರು.

# ಶೋಷಿತರ ಮಕ್ಕಳಿಗೆ ಉತ್ತಮ ಶಿಕ್ಷಣ ಸಿಗಲಿ

**ಶಿಡ್ಲಘಟ್ಟ:** ಶೋಷಿತರ ಮಕ್ಕಳು ಉತ್ತಮ ಶಿಕ್ಷಣ ಪಡೆದು, ಸಮಾಜದ ಮುಖ್ಯವಾಹಿನಿಯಲ್ಲಿ ಸಾಗಲು ಅವಕಾಶವಿಲ್ಲದೆ ಬಡಾವಣೆ ಮತ್ತು ಶೋಷಿತ ಸ್ಥಿತಿಯಲ್ಲೇ ಉಳಿಯಬಾರದು ಎಂದು ಆಹಾರ ಮತ್ತು ನಾಗರಿಕ ಸರಬರಾಜು ಸಚಿವ ಕೆ.ಎಚ್.ಮುನಿಯಪ್ಪ ತಿಳಿಸಿದರು.

ತಾಲ್ಲೂಕಿನ ಎಚ್. ಕ್ರಾಸ್‌ನ ಸಿಂಚನ ಕಲ್ಯಾಣ ಮಂಟಪದಲ್ಲಿ ನಡೆದ ಕರ್ನಾಟಕ ಆದಿಜಾಂಬವ ಸೇವಾ ಸಂಘದ ಉದ್ಘಾಟನಾ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಬಾಬಾ ಸಾಹೇಬ್ ಅಂಬೇಡ್ಕರ್ ಅವರು ಸಂವಿಧಾನದಲ್ಲಿ ಸೂಚಿಸಿದಂತೆ ಸಮಾನತೆ ಮತ್ತು ಸಹಬಾಳ್ವೆಯ ಜೀವನ ನಮ್ಮೆಲ್ಲರಿಗೂ ಸಿಗುವವರೆಗೂ ಹೋರಾಟವನ್ನು ನಿಲ್ಲಿಸಬಾರದುಈ ಹೋರಾಟ ಶಾಂತಿಯುತವಾಗಿಇರಬೇಕು ಎಂದರು.

ಸರ್ಕಾರವು ಮೊರಾಜಿ ದೇಸಾಯಿ, ಕಿತ್ತೂರು ರಾಣಿ ಚನ್ನಮ್ಮ, ಅಂಬೇಡ್ಕರ್ ಮತ್ತು ವಾಲ್ಮೀಕಿ ವಸತಿ ಶಾಲೆಗಳನ್ನು ಪ್ರಾರಂಭಿಸಿರುವುದು ಇದರಲ್ಲೊಂದು ದೊಡ್ಡ ಹೆಜ್ಜೆಯಾಗಿದೆ ಅಂಬೇಡ್ಕರ್ ಅವರ ದಾರಿ ನಮ್ಮೆಲ್ಲರಿಗಾಗಿ ದಿಕ್ಕುದೀಪವಾಗಿದೆ ಅವರ ಸಂವಿಧಾನ ನಮಗೆ ಸಮಾನ ಹಕ್ಕು ಮತ್ತು ಸಹಬಾಳ್ವೆ ನೀಡಲು ಅನುವು ಮಾಡಿಕೊಟ್ಟಿದೆ ಆದರೆ ಈ ಹೋರಾಟ ಯಾರ ವಿರುದ್ದವೂ ಅಲ್ಲ,ನಮ್ಮ ಹಕ್ಕುಗಳನ್ನು ಪಡೆಯಲು ಮತ್ತು ಸಮಾಜದಲ್ಲಿ ಸಮಾನತೆ ಸಾಧಿಸಲು ಕೇವಲ ಶಾಂತಿಯುತವಾದ ಹೋರಾಟವಾಗಿರಬೇಕು ಎಂದು ಹೇಳಿದರು.



ಕಡಪದ ಆದಿ ಜಾಂಬವ ಮಠದ ಶ್ರೀ ಆನಂದಮುನಿಸ್ವಾಮೀಜಿ ಮಾತನಾಡಿ,ಆದಿ ಜಾಂಬವನ ಶ್ರೀರಾಮನಿಂದ ಪೂಜಿಸಲ್ಪಟ್ಟ ಶ್ರೇಷ್ಠ ವ್ಯಕ್ತಿಯಾಗಿದ್ದನು ನಾವು ಅವರ ಸಮುದಾಯದವರಾಗಿ ಶ್ರೇಷ್ಠ ಬದುಕು ರೂಪಿಸಬೇಕು, ನಮ್ಮ ಜೀವನವನ್ನು ಮಾದರಿಯಾಗಿ ರೂಪಿಸಬೇಕು. ವಾಲ್ಮೀಕಿಯ ರಾಮಾಯಣದಲ್ಲಿ ಉಲ್ಲೇಖಿತ ಆದಿ ಜಾಂಬವನ ಮಹತ್ವವನ್ನು ತಿಳಿಯಲು ಪ್ರತಿಯೊಬ್ಬರೂ ಪ್ರಯತ್ನಿಸಬೇಕು ಎಂದರು.

ಇದೇ ವೇಳೆ ಪದ್ಮಶ್ರೀ ಪಿಂಡಿಪಾಪನಹಳ್ಳಿ ಮುನಿವೆಂಕಟಪ್ಪ, ಹೋರಾಟಗಾರ ಅಜ್ಜಪ್ಪ, ಡಿಕೆಡಿ ವಿಜೇತ ನೃತ್ಯಪಟು ಶಶಾಂಕ್, ಮತ್ತು ಬುರಕಥೆ ವಿದ್ವಾಂಸ ಕೈವಾರದ ವೆಂಕಟೇಶ್ ಅವರನ್ನು ಸನ್ಮಾನಿಸಲಾಯಿತು.

ಜನಪದ ಗಾಯಕ ವೇಚಲ್ ಅರುಣ್ ತಂಡದಿಂದ ಜನಪದ ಗಾಯನ, ಸಚಿನ್ ಡ್ಯಾನ್ಸ್ ಸ್ಟುಡಿಯೋ ಮಕ್ಕಳು ಮತ್ತು ಎಚ್. ಕ್ರಾಸ್ ಶಾಲಾ ಮಕ್ಕಳ ಸಾಂಸ್ಕೃತಿಕ ಕಾರ್ಯಕ್ರಮಗಳು ಏರ್ಪಡಿಸಲಾಗಿತ್ತು.

ಈ ಸಂದರ್ಭದಲ್ಲಿ ಆದಿ ಜಾಂಬವ ಸೇವಾ ಸಂಘದ ಅಧ್ಯಕ್ಷ ಕೆ.ಎಂ. ನರಸಿಂಹಮೂರ್ತಿ,ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷೆ ಸಹನಾರಾಜೀವ್‌ಗೌಡ, ಪಿಎಲ್‌ಡಿ ಬ್ಯಾಂಕ್ ನಿರ್ದೇಶಕ ಭೀಮೇಶ್, ದಸಂಸ ಮುಖಂಡ ಗಂಗಾಧರಪ್ಪ, ಮಾದಿಗ ದಂಡೋರದ ದೇವರಾಜ್, ಭಾರತೀಯ ಸೇವಾ ಸಮಿತಿಯ ಅಮರ್‌ನಾಥ್ ಮತ್ತಿತರರು ಪಾಲ್ಗೊಂಡಿದ್ದರು.

# ಸಹಕಾರ ರಂಗ ಬಲಪಡಿಸಲು ಬೃಹತ್ ರೈತ ಜಾಗೃತಿ ಸಮಾವೇಶ

**ಯಲಬುರ್ಗಾ:** ಗ್ರಾಮೀಣ ಮತ್ತು ಪಟ್ಟಣದ ರೈತರನ್ನು ಕೃಷಿ ಸ್ನೇಹಿ ಮತ್ತು ಸಹಕಾರ ಬ್ಯಾಂಕ್ ಗಳತ್ತ ಸೆಳೆಯಲು ಮತ್ತು ಯಲಬುರ್ಗಾ ಕುಕನೂರು ಅವಳಿ ತಾಲೂಕಿನಲ್ಲಿ ಸಹಕಾರ ರಂಗವನ್ನು ಬಲ ಪಡಿಸಲು ಬ್ರಹತ್ ಜಾಗೃತಿ ಸಮಾವೇಶ ನಡೆಸಲಾಗುವುದು ಎಂದು ಆರ್ ಡಿ ಸಿ ಸಿ ನಿರ್ದೇಶಕ ಶೇಖರಗೌಡ ಉಳ್ಳಾಗಡ್ಡಿ ಅವರು ಹೇಳಿದ್ದಾರೆ.

ಪಟ್ಟಣದ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್ ನ ಕಚೇರಿಯಲ್ಲಿ ಸುದ್ದಿಗೋಷ್ಠಿ ನಡೆಸಿ ಈ ಮಾಹಿತಿ ನೀಡಿದ ಅವರು. ಜನೆವರಿ ಕೊನೆಯ ವಾರ ಇಲ್ಲವೇ ಫೆಬ್ರವರಿ ಮೊದಲ ವಾರದಲ್ಲಿ ತಾಲೂಕಿನಲ್ಲಿ ರೈತರ ಜಾಗೃತಿಗಾಗಿ ಬ್ರಹತ್ ಸಮಾವೇಶ ನಡೆಸಲಾಗುತ್ತಿದೆ ಎಂದು ಹೇಳಿದರು.



ಗ್ರಾಮೀಣ ಮತ್ತು ಪಟ್ಟಣದ ಅನೇಕ ರೈತರಿಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ರೈತರಿಗೆ ನೀಡುವ ಯೋಜನೆಗಳು, ಪ್ರಯೋಜನ, ಸಾಲ, ಸವಲತ್ತುಗಳ ಬಗ್ಗೆ ಮಾಹಿತಿ ಕೊರತೆ ಇದೆ. ಸರ್ಕಾರದ ಅನೇಕ ಸೌಲಭ್ಯಗಳು ತಾಲೂಕಿನ ಪ್ರತೀ ರೈತರಿಗೆ ತಲುಪಿಸಬೇಕು, ಮತ್ತು ಅವರನ್ನು ಸಹಕಾರ ಕ್ಷೇತ್ರದತ್ತ ಸೆಳೆಯಬೇಕಿದೆ, ಹೀಗಾಗಿ ತಾಲೂಕಿನಲ್ಲಿ ಸಿ ಎಂ ಆರ್ಥಿಕ ಸಲಹೆಗಾರ, ಶಾಸಕ ಬಸವರಾಜ್ ರಾಯರಡ್ಡಿ ಅವರು ಈ ಬಗ್ಗೆ ವಿಶೇಷ ಮುತುವರ್ಜಿ ವಹಿಸಿದ್ದು ಅವರ ಮಾರ್ಗದರ್ಶನದಲ್ಲಿ ರೈತರ ಜಾಗೃತಿ ಸಮಾವೇಶ ನಡೆಸಲು ತೀರ್ಮಾನಿಸಲಾಗಿದೆ.

ಇದರಲ್ಲಿ ಸಹಕಾರ ರಂಗದಲ್ಲಿ ಬರುವ ತಾಲೂಕಿನ ಎಲ್ಲಾ 34 ಪ್ರಾಥಮಿಕ ಕೃಷಿ ಪತ್ತಿನ ಸಂಘದ ನಿರ್ದೇಶಕರು, ಹಾಲು ಉತ್ಪಾದಕರ ಸಂಘಗಳ ನಿರ್ದೇಶಕರು, ಎಣ್ಣೆ ಬೆಳೆಗಾರರ ಸಂಘದ ಸದಸ್ಯರು ಸೇರಿಕೊಂಡು ಬ್ರಹತ್ ಜಾಗೃತಿ ಸಮಾವೇಶ ನಡೆಯಲಿದೆ. ಈಗಾಗಲೇ ಸಮಾವೇಶದ ರುಪುರೇಶಗಳನ್ನು ಸಿದ್ದಪಡಿಸಲಾಗಿದ್ದು ಇದಕ್ಕಾಗಿ ತಾಲೂಕಿನ ಎಲ್ಲ ಸಹಕಾರ ರಂಗದ ನಿರ್ದೇಶಕರನ್ನೊಳಗೊಂಡ ಸಮಿತಿ ರಚಿಸಲಾಗಿದೆ.

ಸಮಾವೇಶದಲ್ಲಿ ಸಹಕಾರ ಸಚಿವ ಕೆ ಎನ್ ರಾಜಣ್ಣ ಭಾಗವಹಿಸಲಿದ್ದು, ಕಾನೂನು ಸಚಿವ ಎಚ್ ಕೆ ಪಾಟೀಲ್, ಶಾಸಕ ಬಸವರಾಜ್ ರಾಯರಡ್ಡಿ, ಉಸ್ತುವಾರಿ ಸಚಿವ ಶಿವರಾಜ್ ತಂಗಡಗಿ ಸೇರಿದಂತೆ ಮಂತ್ರಿ ಮಂಡಲದ ಇನ್ನಿತರ ಸಚಿವರು ಸಮಾವೇಶದಲ್ಲಿ ಪಾಲ್ಗೊಳ್ಳಲಿದ್ದಾರೆ ಎಂದು ಶೇಖರಗೌಡ ಉಳ್ಳಾಗಡ್ಡಿ ಅವರು ಹೇಳಿದರು.

ಈ ಸಂದರ್ಭದಲ್ಲಿ ಪಿಕಾರ್ಡ್ ಬ್ಯಾಂಕ್ ಅಧ್ಯಕ್ಷ ಚಂದ್ರಶೇಖರಯ್ಯ ಹಿರೇಮಠ ಜಾಗೃತಿ ಸಮಾವೇಶದಲ್ಲಿ ಅವಳಿ ತಾಲೂಕಿನ ರೈತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕೆಂದು ಹೇಳಿದರು.

# ಮಲೆ ಮಹದೇಶ್ವರ ಬೆಟ್ಟಕ್ಕೆ ಸಚಿವರ ಭೇಟಿ: ಪರಿಶೀಲನೆ



**ಚಾಮರಾಜನಗರ:** ಪಶು ಸಂಗೋಪನೆ,ರೇಷ್ಮೆ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಾದ ಕೆ.ವೆಂಕಟೇಶ್ ಅವರು ಮಲೆ ಮಹದೇಶ್ವರ ಬೆಟ್ಟಕ್ಕೆ ಇಂದು ಭೇಟಿ ನೀಡಿ ಸಚಿವ ಸಂಪುಟ ಸಭೆ ಸಂಬಂಧ ಸ್ಥಳ ಹಾಗೂ ಪೂರ್ವ ಸಿದ್ದತೆಗಳನ್ನು ಪರಿಶೀಲಿಸಿದರು.

ಮಲೆ ಮಹದೇಶ್ವರ ಬೆಟ್ಟದ ದೀಪದ ಗಿರಿ ಒಡ್ಡುವಿನಲ್ಲಿರು ಮಲೆಮಹದೇಶ್ವರರ ಬೃಹತ್ ಪ್ರತಿಮೆ ಇರುವ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆನಡೆಸಿದರು. ಅಧಿಕಾರಿಗಳೊಂದಿಗೆ ಚರ್ಚಿಸಿ ವಿವರ ಪಡೆದರು. ಬಳಿಕ ಮಲೈಮಹದೇಶ್ವರ ದೇವಾಲಯಕ್ಕೆ ಭೇಟಿ ನೀಡಿ ದೇವರ ದರ್ಶನ ಪಡೆದರು.

ಶಾಸಕರಾದ ಎಂ.ಆರ್.ಮಂಜುನಾಥ್,ಪ್ರಾದೇಶಿಕ ಆಯುಕ್ತರಾದ ಡಿ.ಎಸ್.ರಮೇಶ್,ಜಿಲ್ಲಾಧಿಕಾರಿ ಶಿಲ್ಪಾ ನಾಗ್,ಡಿಐಜಿಪಿ ಡಾ.ಬೋರಲಿಂಗಯ್ಯ ,ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಕಧಿಕಾರಿ ಮೋನಾ ರೋತ್,ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಬಿ.ಟಿ. ಕವಿತ,ಉಪವಿಭಾಗಧಿಕಾರಿ ಬಿ.ಆರ್‌ಮಹೇಶ್,ಮಲೈಮಹದೇಶ್ವರ ಕ್ಷೇತ್ರಾಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿಗಳಾ ಎ.ಇ.ರಘು ಇನ್ನಿತರರು ಇದ್ದರು.

# ಅಯ್ಯಪ್ಪಸ್ವಾಮಿ ಭಕ್ತಿ ಗೀತೆಯ ಬೃಹತ್ ಭಜನೆ ಕಾರ್ಯಕ್ರಮ



**ಕೊರಟಗೆರೆ:** ಕೊರಟಗೆರೆ ಪಟ್ಟಣದ ಬಸ್‌ಸ್ಟಾಂಡ್ ವೃತ್ತದಲ್ಲಿ ಅಯ್ಯಪ್ಪಸ್ವಾಮಿ ಭಕ್ತಿಗೀತೆಯ ಬೃಹತ್ ಭಜನೆ ಕಾರ್ಯಕ್ರಮ ಸಡಗರದಿಂದ ನಡೆಯಿತು.

ಪಟ್ಟಣದ ಶ್ರೀ ಅಯ್ಯಪ್ಪಸ್ವಾಮಿ ಭಕ್ತಮಂಡಲಿ ಹಾಗೂ ಮಣಿಕಂಠಸ್ವಾಮಿಕಟ್ಟಡ ಸಮಿತಿ ವತಿಯಿಂದ ಪಟ್ಟಣದ ಪಟ್ಟಣಪಂಚಾಯತಿ ಮುಂಭಾಗದಲ್ಲಿ ಶಬರಿ ಮಲೆಯಅಯ್ಯಪ್ಪ ಸ್ವಾಮಿದೇಗುಲದಂತೆಬೃಹತ್ ವೇದಿಕೆಯನ್ನುನಿರ್ಮಾಣ ಮಾಡಲಾಗಿತು.

ದಕ್ಷಿಣ ಭಾರತದ ಪ್ರಸಿದ್ದ ಅಯ್ಯಪ್ಪ ಸ್ವಾಮಿ ಭಕ್ತಿ ಗೀತೆಗಳ ಗಾಯಕರಾದ ತಮಿಳುನಾಡಿನ ವೀರಮಣಿರಾಜು ಮತ್ತುಅಭಿಷೇಕ್‌ರಾಜುರವರತಂಡ ಅದ್ಭುತವಾದ ಅಯ್ಯಪ್ಪ ಸ್ವಾಮಿಯ ಭಕ್ತಿ ಗೀತೆಗಳನ್ನು ಹಾಡಿದರು.

ಕೊರಟಗೆರೆ ತಾಲ್ಲೂಕು ಸುತ್ತಮುತ್ತಲ ಪ್ರದೇಶದ ಸುಮಾರು 800 ಅಯ್ಯಪ್ಪಸ್ವಾಮಿ ಮಾಲಾದಾರಿಗಳು, 2500 ಸಾರ್ವಜನಿಕರು ಈ ಬೃಹತ್‌ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು, ಭಕ್ತಿಗೀತೆ ಗಾಯನದ ಜೊತೆಯಲ್ಲಿಯೇ ಅಯ್ಯಪ್ಪಸ್ವಾಮಿ ವಿಗ್ರಹಕ್ಕೆ ಎಲ್ಲಾ ರೀತಿಯ ಧಾರ್ಮಿಕ ವಿದಿ ವಿಧಾನದಲ್ಲಿ ಅಭಿಷೇಕ ಮಾಡಲಾಯಿತು.

ನಂತರ ಪಡಿಪೂಜೆಯನ್ನು ಮಾಡುವ ಮೂಲಕ ಕಾರ್ಯಕ್ರಮವನ್ನು ಪೂರ್ಣಗೊಳಿಸಲಾಯಿತು. ಬಂದಂತಹಎಲ್ಲಾ ಭಕ್ತರಿಗೂ ವಿಶೇಷ ಪ್ರಸಾದ ವ್ಯವಸ್ಥೆಯನ್ನು ಮಾಡಲಾಯಿತು.

ಈ ಸಂದರ್ಭದಲ್ಲಿ ಪ್ರಸಿದ್ದ ಗಾಯಕರಾದ ವೀರಮಣಿರಾಜುಮಾತನಾಡಿ, ಅಯ್ಯಪ್ಪ ಸ್ವಾಮಿ ಭಕ್ತರುಕಠಿಣ ವ್ರತವನ್ನು ಮಾಡಿ ಶಬರಿಮಲೆಗೆ ಹೋಗುವುದರಿಂದಎಲ್ಲರಿಗು ಒಳ್ಳೆಯದಾಗುತ್ತದೆ ಎನ್ನುವ ನಂಬಿಕೆ ಇದೆಅದೇರೀತಿಅಯ್ಯಪ್ಪ ಸ್ವಾಮಿ ಸಮಾಜದಎಲ್ಲರಿಗೂ ಒಳ್ಳೆಯದನ್ನು ಮಾಡುತ್ತಾರೆಕೊರಟಗೆರೆ ಪಟ್ಟಣದಲ್ಲಿ ಈ ಕಾರ್ಯಕ್ರಮವನ್ನುಅದ್ಭುತವಾಗಿ ಮಾಡಿದ್ದಾರೆಎಂದರು.

ಅಯ್ಯಪ್ಪ ಸ್ವಾಮಿ ಸೇವಾ ಸಮಿತಿಯಅಧ್ಯಕ್ಷ ಶಿವಕುಮಾರ್ ಮಾತನಾಡಿ, ಅಯ್ಯಪ್ಪ ಸ್ವಾಮಿ ವ್ರತಆಚರಣೆಯಲ್ಲಿಜಾತಿ ಮತ ಬೇದಗಳು ಇರುವುದಿಲ್ಲ, ಇಂತಹಅತಿಯಾದ ಚಳಿಯ ವಾತಾವರಣದಲ್ಲೂ ಸಹ ಬೆಳಗಿನ ಜಾವತಣ್ಣನೆಯಕೊರೆಯುವ ನೀರಿನಲ್ಲಿ ಸ್ನಾನ ಮಾಡಿ ವ್ರತ ಮಾಡುವ ವಿಧಾನವು ಪ್ರಪಂಚದಲ್ಲಿಯೇಎಲ ್ಲೂಇಲ್ಲಕೊರಟಗೆರೆ ಪಟ್ಟಣದಲ್ಲಿಇಂದುಅದ್ಭುತವಾದ 'ಅಯ್ಯಪ್ಪ ಸ್ವಾಮಿಯ ಭಕ್ತಿಗೀತೆಗಳ ಭಜನೆ ನಡೆದಿದೆ ಈ ಕಾರ್ಯಕ್ರಮಕ್ಕೆಕ್ಷೇತ್ರದ ಶಾಸಕರು ಹಾಗು ಗೃಹ ಸಚಿವರಾದಡಾ.ಜಿ. ಪರಮೇಶ್ವರ್‌ರವರು ಬೃಹತ್ ವೇದಿಕೆಯನ್ನು ನಿರ್ಮಿಸಿ ಕೊಟ್ಟಿದ್ದಾರೆಅದೇರೀತಿಯಾಗಿ ಹಲವಾರು ಸಂಘಗಳು, ಜನ ಪ್ರತಿನಿಧಿಗಳು ಮತ್ತು ಸಾರ್ವಜನಿಕರುಸಹಕಾರ ನೀಡಿದ್ದುಎಲ್ಲರಿಗೂ ಕೃತಜ್ಞತೆಯನ್ನು ಸಲ್ಲಿಸುವುದಾಗಿ ತಿಳಿಸಿದರು.

ಬಾವೈಕ್ಯತೆಯಿಂದ ನಡೆದಕಾರ್ಯಕ್ರಮ – ಪಟ್ಟಣದಲ್ಲಿ ನಡೆದಅಯ್ಯಪ್ಪ ಸ್ವಾಮಿಯ ಬಜನೆಕಾರ್ಯಕ್ರಮಕ್ಕೆ ಪಟ್ಟಣದ ಹಣ್ಣಿನ ವ್ಯಾಪಾರಿಇರ್ಷಾದ್‌ಹಣ್ಣನ್ನು ನೀಡಿದ್ದರು, ಕೇಬಲ್ ಸೈಫುಲ್ಲಾರವರು 3ಕೆಜಿ ಯಷ್ಟುಗೋಡಂಬಿ ನೀಡಿದ್ದರು, ಇವರುಗಳ ಜೊತೆಗೆ ಪಟ್ಟಣದ ಮಕ್ತಿಯಾರ್ ಸಂಗಡಿಗರು ಭಜನಾಕಾರ್ಯಕ್ರಮಕ್ಕೆ ಬಂದು ವೀರಮಣಿರಾಜುರವರಿಗೆಗೌರವ ಸಲ್ಲಿಸಿದರು ಈ ಅಭಿನಂದನೆಗೆ ವಾವರ್ ಸ್ವಾಮಿರವರಗೀತೆಯನ್ನು ವಿಶೇಷವಾಗಿ ಹಾಡಲಾಯಿತು.

ಈ ಸಂದರ್ಭದಲ್ಲಿ ಸಮಿತಿಯ ಪದಾದಿಕಾರಿಗಳಾದ ಎಂ.ಜಿ.ಬದರಿನಾಥ್, ನವೀನ್‌ಗುಪ್ತ, ಸದಾಶಿವಯ್ಯ, ಕೆ.ಬಿ.ಲೋಕೇಶ್, ಹೂ ಮಂಜುನಾಥ್, ಜಗದೀಶ್, ಗಂಗಾಧರ್, ಹೋಟೆಲ್ ಮಂಜುನಾಥ್,ಬೆಂಡ್ ಮಂಜುನಾಥ್, ಶಶಿ ಸೇರಿದಂತೆ ಇತರರು ಹಾಜರಾಗಿದ್ದರು.



## ಯರಗನಹಳ್ಳಿ: ಅಗ್ನಿ ಅವಘಡ, ಮುನ್ನೆಚ್ಚರಿಕೆ ಕ್ರಮಗಳ ಕುರಿತು ಪ್ರಾತ್ಯಕ್ಷಿಕೆ–ಉಪನ್ಯಾಸ

**ಚಾಮರಾಜನಗರ:** ಚಾಮರಾಜನಗರ ವಿಶ್ವವಿದ್ಯಾನಿಲಯದ ವತಿಯಿಂದ ತಾಲೂಕಿನ ಯರಗನಹಳ್ಳಿ ಗ್ರಾಮದಲ್ಲಿ ಏರ್ಪಡಿಸಲಾಗಿರುವ ಎನ್.ಎಸ್.ಎಸ್ ವಾರ್ಷಿಕ ವಿಶೇಷ ಶಿಬಿರದಲ್ಲಿ ಸೋಮವಾರ (ಜ.06) ಜಿಲ್ಲಾ ಅಗ್ನಿಶಾಮಕ ಠಾಣೆಯ ಸಹಾಯಕ ಠಾಣಾಧಿಕಾರಿ ಶಿವಾಜಿರಾವ್ ಪಾಟೀಲ್ ಹಾಗೂ ತಂಡದಿಂದ ಅಗ್ನಿ ಅವಘಡಗಳು, ಮುನ್ನೆಚ್ಚರಿಕೆ ಕ್ರಮಗಳ ಕುರಿತು ಪ್ರಾತ್ಯಕ್ಷಿಕೆ ಹಾಗೂ ಉಪನ್ಯಾಸ ನೀಡಲಾಯಿತು.

ಗ್ರಾಮೀಣ ಪ್ರದೇಶಗಳಲ್ಲಿ ರಾಷ್ಟ್ರೀಯ ಸೇವಾ ಯೋಜನೆ (ಎನ್‌ಎಸ್‌ಎಸ್) ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದರಿಂದ ಜನ ಜಾಗೃತಿ ಹೆಚ್ಚಾಗಲಿದೆ. ಪ್ರಾತ್ಯಕ್ಷಿಕೆ ಮತ್ತು ಉಪನ್ಯಾಸದ ಮೂಲಕ ಹೆಚ್ಚಿನ ಮಾಹಿತಿ ನೀಡುವುದರಿಂದ ಗ್ರಾಮಸ್ಥರಿಗೆ, ಶಿಬಿರಾರ್ಥಿಗಳಿಗೆ ಹಾಗೂ ವಿದ್ಯಾರ್ಥಿಗಳಿಗೆ ಮುನ್ನೆಚ್ಚರಿಕೆ ಕ್ರಮದ ಬಗ್ಗೆ ಅರಿವು ಮೂಡಿಸಲಾಯಿತು.

ಇದೇ ವೇಳೆ ಚಾಮರಾಜನಗರ ವಿಶ್ವವಿದ್ಯಾನಿಲಯದ ಎನ್. ಎಸ್.ಎಸ್ ಸಂಯೋಜನಾಧಿಕಾರಿ ಡಾ. ಆರ್. ಮಹೇಶ್‌ಅವರು ಮಾತನಾಡಿ ಪ್ರಸ್ತುತ ದಿನಗಳಲ್ಲಿ ಅಗ್ನಿ ಅವಘಡಗಳಿಂದ ಅನಾಹುತಗಳು ಅಧಿಕವಾಗುತ್ತಿದ್ದು, ಈ ಬಗ್ಗೆ ಜನರಿಗೆ ಅರಿವಿನ ಕೊರತೆಯಿದೆ. ಇಂತಹ ಪ್ರಾತ್ಯಕ್ಷಿಕೆಗಳು ಮತ್ತು ವಿಶೇಷ ಉಪನ್ಯಾಸಗಳು ಪ್ರತಿಯೊಬ್ಬರಿಗೂ ಅನಿವಾರ್ಯ ಹಾಗೂ ಅರ್ಥಪೂರ್ಣವಾಗಿದೆ ಎಂದು ಹೇಳಿದರು.

ಕನ್ನಡ ಉಪನ್ಯಾಸಕರಾದ ಯರಗನಹಳ್ಳಿ ಗುರುರಾಜು, ಶಿಕ್ಷಕರಾದ ನಾಗೇಶ್, ಶಿಬಿರಾರ್ಥಿಗಳು, ವಿದ್ಯಾರ್ಥಿಗಳು, ಕಾರ್ಯಕ್ರಮದಲ್ಲಿ ಇದ್ದರು. ಚರ್ಚಿಸಿ ವಿವರ ಪಡೆದರು. ಬಳಿಕ ಮಲೆ ಮಹದೇಶ್ವರ ದೇವಾಲಯಕ್ಕೆ ಭೇಟಿ ನೀಡಿ ದೇವರ ದರ್ಶನ ಪಡೆದರು.

ಶಾಸಕರಾದ ಎಂ.ಆರ್. ಮಂಜುನಾಥ್, ಪ್ರಾದೇಶಿಕ ಆಯುಕ್ತರಾದ ಡಿ.ಎಸ್.ರಮೇಶ್, ಜಿಲ್ಲಾಧಿಕಾರಿ ಶಿಲ್ಪಾ ನಾಗ್, ಡಿಐಜಿಪಿ ಡಾ. ಬೋರಲಿಂಗಯ್ಯ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮೋನಾ ರೋತ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ. ಬಿ.ಟಿ. ಕವಿತ, ಉಪವಿಭಾಗಾಧಿಕಾರಿ ಬಿ.ಆರ್. ಮಹೇಶ್, ಮಲೆ ಮಹದೇಶ್ವರ ಕ್ಷೇತ್ರಾಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ಎ.ಇ. ರಘು ಇನ್ನಿತರರು ಇದ್ದರು.

# ಯುವಪೀಳಿಗೆಯ ಮುಂದಿನ ಭವಿಷ್ಯಕ್ಕಾಗಿ ರೈತರು ಯೋಧರಾಗಬೇಕು

**ಮುಳಬಾಗಿಲು:** ಯುವಪೀಳಿಗೆಯ ಮುಂದಿನ ಭವಿಷ್ಯಕ್ಕಾಗಿ ಕೆರೆ, ಜಾನುವಾರುಗಳ ರಕ್ಷಣೆಗಾಗಿ ಗೋಮಾಳ ಜಮೀನನ್ನು ಉಳಿಸಿಕೊಳ್ಳಲು ದೇಶ ಕಾಯುವ ಯೋಧರಂತೆ ಸರ್ಕಾರಿ ಆಸ್ತಿಗಳನ್ನು ಭೂಗಳ್ಳರಿಂದ ರಕ್ಷಣೆ ಮಾಡಿಕೊಳ್ಳಲು ರೈತರು ಮುಂದಾಗಬೇಕೆಂದು ರೈತಸಂಘದ ರಾಜ್ಯ ಉಪಾಧ್ಯಕ್ಷ ಕೆ.ನಾರಾಯಣಗೌಡ ರೈತರಲ್ಲಿ ಮನವಿ ಮಾಡಿದರು.

ಕಂದಾಯ ಸಚಿವರಾದ ಕೃಷ್ಣಬೈರೇಗೌಡರು ಪ್ರತಿ ವಾರಕ್ಕೊಂದು ಕೆರೆ ಒತ್ತುವರಿ ತೆರವುಗೊಳಿಸಬೇಕೆಂಬ ಆದೇಶ ಎಲ್ಲಿ ಹೋಯಿತು. ಭೂಗಳ್ಳರ ಸೂಟ್ ಕೇಸ್ ನಲ್ಲಿ ಕಳೆದು ಹೋಯಿತೇ ಇಲ್ಲವೇ. ಕೆರೆ ಉಳಿಸಲು ಅಧಿಕಾರಿಗಳಿಗೆ ಇಚ್ಛಾಶಕ್ತಿ ಕೊರತೆಯೇ ಎಂದು ಆದೇಶವನ್ನು ಪಾಲಿಸದ ಅಧಿಕಾರಿಗಳನ್ನು ಪ್ರಶ್ನೆ ಮಾಡಿದರು.

ಆವಣಿ ಹೋಬಳಿ ದೇವರಾಯಸಮುದ್ರ ಕಂದಾಯ ವ್ಯಾಪ್ತಿಯ ತಮ್ಮೇಗೌಡನ ಕೆರೆಯಲ್ಲಿ ವಿಶ್ವ ರೈತದಿನಾಚರಣೆಯನ್ನು ಕೆರೆಗೆ ಪೂಜೆ ಮಾಡಿ ಉಚಿತ ತರಕಾರಿ ಹಂಚುವ ಮುಖಾಂತರ ಕೆರೆ ಉಳಿಸುವ ಪ್ರತಿಜ್ಞೆಯೊಂದಿಗೆ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಹತ್ತಾರು ಹಳ್ಳಿಯ ಪೂರ್ವಜರು ವರ್ಷಾನುಗಟ್ಟಲೇ ಒಗ್ಗಟ್ಟಿನಿಂದ ಬೆವರು ಸುರಿಸಿ ಕಟ್ಟಿ ಬೆಳೆಸಿದಂತಹ ಕೆರೆಗಳ ಮೇಲೆ ಬೆಂಗಳೂರು ರಿಯಲ್ ಎಸ್ಟೇಟ್ ಭೂಗಳ್ಳರ ವಕ್ರದೃಷ್ಟಿ ಬಿದ್ದು, ದಿನೇದಿನೇ ಒತ್ತುವರಿಯಾಗಿ ನಶಿಸಿ ಹೋಗುತ್ತಿದ್ದರೂ ಕೆರೆ ಬಗ್ಗೆ ಆ ವ್ಯಾಪ್ತಿಯ



ಗ್ರಾಮೀಣ ಪ್ರದೇಶದ ರೈತಾಪಿ ವರ್ಗ ಧ್ವನಿ ಎತ್ತದೇ ಇರುವುದು ದುರಾದೃಷ್ಟಕರ ಎಂದು ಕಾರ್ಯಕ್ರಮದಲ್ಲಿ ಅಸಮಧಾನ ವ್ಯಕ್ತಪಡಿಸಿದರು.

ಲಕ್ಷಲಕ್ಷ ಸಂಬಳ ಪಡೆದು ಜನಸೇವೆ ಮಾಡುವ ಜೊತೆಗೆ ಸರ್ಕಾರಿ ಆಸ್ತಿಗಳನ್ನು ಉಳಿಸಬೇಕಾದ ಕಂದಾಯ, ಸರ್ವೇ ಅಧಿಕಾರಿಗಳೇ ಭೂಗಳ್ಳರ ಜೊತೆ ಶಾಮೀಲಾಗಿ ಲಕ್ಷಲಕ್ಷ ಲಂಚ ಪಡೆದು ಜಲ ಮೂಲಗಳಿಗೆ ಅಕ್ರಮ ದಾಖಲೆಗಳನ್ನು ಸೃಷ್ಟಿಸಿ ರಾತ್ರೋರಾತ್ರಿ ಕೆರೆಗಳು ಸ್ವರೂಪವನ್ನೇ ಕಳೆದುಕೊಂಡಿವೆ ಎಂದು ಭೂಗಳ್ಳರಿಗೆ ಸ್ಥಳೀಯ ರೈತರ ಹೆಸರಿನಲ್ಲಿ ಮಂಜೂರು ಮಾಡಿದ ದೊಡ್ಡ ಜಾಲವೇ ಕಂದಾಯ ಸರ್ವೇ ಇಲಾಖೆಯಲ್ಲಿ ಕೆಲಸ ನಿರ್ವಹಿಸುತ್ತಿದೆ ಎಂದು ಆರೋಪಿಸಿದರು.

ಜಿಲ್ಲಾ ಪ್ರಧಾನ ಕಾರ್ಯದರ್ಶಿ ಹೆಬ್ಬಣಿ ಆನಂದರೆಡ್ಡಿ ಮಾತನಾಡಿ, ಕೈಗಾರಿಕೆ, ರಸ್ತೆ, ನಿವೇಶನ ಮತ್ತಿತರರ ಅಭಿವೃದ್ಧಿ ಹೆಸರಿನಲ್ಲಿ ಕೃಷಿ ಭೂಮಿಯನ್ನು ರೈತರಿಂದ ಬಲವಂತವಾಗಿ ಭೂಸ್ವಾಧೀನ ಮಾಡಿಕೊಳ್ಳುವುದನ್ನು ಕೈಬಿಡಬೇಕು.

ಈಗಾಗಲೇ ಭೂಸ್ವಾಧೀನ ಮಾಡಿಕೊಂಡಿರುವ ಭೂಮಿಯನ್ನು ಕೈಗಾರಿಕೆಗಳಿಗೆ ಮತ್ತು ಅಭಿವೃದ್ಧಿ ಕಾಮಗಾರಿಗಳಿಗೆ ಉಪಯೋಗಿಸಬೇಕು. ಇಲ್ಲವಾದರೆ ಪದೇಪದೇ ರೈತರ ಕೃಷಿಭೂಮಿ ತಂಟೆಗೆ ಬಂದರೆ ಅಂದು ಸ್ವಾತಂತ್ರ್ಯಕ್ಕಾಗಿ 2ನೇ ಮಹಾಯುದ್ಧ ನಡೆದಿದೆ. ಇಂದು ಕೃಷಿ ಭೂಮಿ ಉಳಿವಿಗಾಗಿ ರೈತರಿಂದಲೇ 3ನೇ ಮಹಾಯುದ್ಧ ಸರ್ಕಾರಗಳ ವಿರುದ್ಧ ಪ್ರಾರಂಭವಾಗುವ ಕಾಲ ದೂರವಿಲ್ಲವೆಂದು ಎಚ್ಚರಿಕೆ ನೀಡಿದರು.


ರಾಷ್ಟ್ರೀಯ ಹೆದ್ದಾರಿ 75 ಅಕ್ಕಪಕ್ಕದಲ್ಲಿರುವ ನೂರಾರು ಎಕರೆ ಸರ್ಕಾರಿ ಜಮಿನು ಬೆಂಗಳೂರು ಭೂಗಳ್ಳರ ಪಾಲಾಗಿದ್ದು, ಮಾನ್ಯ ಜನಪ್ರಿಯ ಶಾಸಕರಾದ ಸಮೃದ್ಧಿ ಮಂಜಣ್ಣನವರು ದೇವರಾಯಸಮುದ್ರ ಕಂದಾಯ ವ್ಯಾಪ್ತಿಯ ಸರ್ಕಾರಿ ಜಮೀನು ಸರ್ವೇ ಮಾಡಲು ವಿಶೇಷ ತಂಡ ರಚನೆ ಮಾಡಿ ಒತ್ತುವರಿ ತೆರವುಗೊಳಿಸಿ ಅಕ್ರಮ ದಾಖಲೆಗಳನ್ನು ಸೃಷ್ಟಿಸಿರುವ ಕಂದಾಯ ಅಧಿಕಾರಿಗಳ ವಿರುದ್ಧ ಕಾನೂನು ಕ್ರಮಕೈಗೊಂಡು ಭೂಮಿ ಇಲ್ಲದ ರೈತರಿಗೆ ಇಲ್ಲವೇ ಜಾನುವಾರುಗಳಿಗೆ ಮೀಸಲಿಡಬೇಕೆಂದು ಕಾರ್ಯಕ್ರಮದಲ್ಲಿ ಒತ್ತಾಯಿಸಿದರು.

ಕಾರ್ಯಕ್ರಮಕ್ಕೆ ಬಂದು ಮನವಿ ಸ್ವೀಕರಿಸಿದ ಕಂದಾಯ ಅಧಿಕಾರಿಗಳಾದ ಸುಬ್ರಮಣಿ ಅವರು, ಸರ್ಕಾರಿ ಆಸ್ತಿಗಳನ್ನು ಉಳಿಸಲು ನಾವು ಬದ್ಧರಾಗಿದ್ದೇವೆ. ಯಾವುದೇ ಒತ್ತಡಕ್ಕೆ ಮಣಿಯದೆ ಕೆರೆ, ಗೋಮಾಳ, ಸರ್ವೇ ಮಾಡಿಸಿ ಒತ್ತುವರಿದಾರರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖಲು ಮಾಡುವ ಭರವಸೆಯನ್ನು ನೀಡಿದರು.

ಕಾರ್ಯಕ್ರಮದಲ್ಲಿ ತಾ.ಅಧ್ಯಕ್ಷ ಪ್ರಭಾಕರ್, ಜಿಲ್ಲಾಧ್ಯಕ್ಷ ಈಕಂಬಳ್ಳಿ ಮಂಜುನಾಥ್, ಫಾರೂಖ್ ಪಾಷ, ರಾಜೇಶ್, ಸುನೀಲ್, ಭಾಸ್ಕರ್, ಬಂಗಾರಿ ಮಂಜು, ಶ್ರೀನಿವಾಸ್, ಜುಬೇರ್ ಪಾಷ, ಧರ್ಮ, ಸುಪ್ರೀಂಚಲ, ಮುನಿರಾಜು, ಶಶಿ, ಗಂಗಾಧರ್, ಅಂಬ್ಲಿಕಲ್ ಮಂಜುನಾಥ್, ಮಲ್ಲಪನಹಳ್ಳಿ ಪ್ರಸನ್ನ, ಕಾಮನೂರು ಬಾಬು, ಮಂಗಸಂದ್ರ ತಿಮ್ಮಣ್ಣ, ಗೀತಾ, ಶೈಲಜ, ರತ್ನಮ್ಮ, ಚೌಡಮ್ಮ ಮುಂತಾದವರಿದ್ದರು.

## ಕೋಟೆ ಬೆಟ್ಟದಲ್ಲಿ ವೈಕುಂಠ ಏಕಾದಶಿ





**ನಾಗಮಂಗಲ:** ಸಾಲಾದ್ರಿ ಶ್ರೀ ಕ್ಷೇತ್ರ ಕೋಟೆ ಬೆಟ್ಟದ ಇತಿಹಾಸ ಪ್ರಸಿದ್ಧ ಶ್ರೀ ವೆಂಕಟರಮಣ ಸ್ವಾಮಿ ದೇವಾಲಯದಲ್ಲಿ 18ನೇ ವರ್ಷದ ವೈಕುಂಠ ಏಕಾದಶಿ ಅದ್ದೂರಿ ಕಾರ್ಯಕ್ರಮ ಜರುಗಲಿದೆ.

ನಾಗಮಂಗಲ ತಾಲೂಕು ದೇವಲಾಪುರ ಹೋಬಳಿಯ ಶ್ರೀ ಸಾಲಾದ್ರಿ ಶ್ರೀ ಕ್ಷೇತ್ರ ಕೋಟೆ ಬೆಟ್ಟ ಗ್ರಾಮದ ಶ್ರೀ ವೆಂಕಟರಮಣ ಸ್ವಾಮಿ 18ನೇ ವರ್ಷದ ವೈಕುಂಠ ಏಕಾದಶಿಯ ವಿಶೇಷ ಪೂಜಾ ಕಾರ್ಯಕ್ರಮ ನೆರವೇರಲಿದ್ದು ಜನವರಿ 9 ಮತ್ತು 10 ಜರುಗಲಿದ್ದು ಭಕ್ತಾದಿಗಳು ಸ್ವಾಮಿಯ ಕೃಪೆಗೆ ಪಾತ್ರರಾಗುವಂತೆ ತಿಳಿಸಿದ್ದಾರೆ.

## ಗ್ರಾಮ ಒನ್ ಕೇಂದ್ರ ತೆರೆಯಲು ಅರ್ಜಿ

**ಚಾಮರಾಜನಗರ:** ಚಾಮರಾಜನಗರ ತಾಲೂಕಿನ ಸಂತೇಮರಹಳ್ಳಿ ಹಾಗೂ ಜ್ಯೋತಿಗೌಡನಪುರ ಗ್ರಾಮ ಪಂಚಾಯಿತಿಗಳಲ್ಲಿ ತಲಾ ಒಂದು ಗ್ರಾಮ ಒನ್ ಕೇಂದ್ರಗಳನ್ನು ತೆರೆಯಲು ಆಸಕ್ತ ಅಭ್ಯರ್ಥಿಗಳಿಂದ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

ಅರ್ಜಿಯನ್ನು ವೆಬ್ ಸೈಟ್ https://kal-mys.gramaone.karnataka.gov.in ಮೂಲಕ ಜನವರಿ 15 ರೊಳಗೆ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗಾಗಿ ಸಹಾಯವಾಣಿ ಸಂಖ್ಯೆ 9148712473 ಸಂಪರ್ಕಿಸುವಂತೆ ಜಿಲ್ಲಾಧಿಕಾರಿ ಕಚೇರಿ ಪ್ರಕಟಣೆ ತಿಳಿಸಿದೆ.

# ರಾಜ್ಯ ಮಟ್ಟದ ಗಾಣಿಗರ ಹಬ್ಬಕ್ಕೆ ಬರಲು ಆಹ್ವಾನ

**ಚೇಳೂರು:** ಬೆಂಗಳೂರಿನ ಶ್ರೀ ಕ್ಷೇತ್ರ ತೈಲೇಶ್ವರ ಗಾಣಿಗರ ಮಹಾ ಸಂಸ್ಥಾನ ಮಠಾದೀಶ ಶ್ರೀ ಪೂರ್ಣಾನಂದಪುರಿ ಮಹಾ ಸ್ವಾಮಿಗಳ ದಿವ್ಯ ಸಾನಿಧ್ಯದಲ್ಲಿ ಜ.11 ರಂದು ರಾಜ್ಯ ಮಟ್ಟದ ಗಾಣಿಗರ ಹಬ್ಬ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದ್ದು ಸಮುದಾಯದವರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಯಶಸ್ವಿಗೊಳಿಸಬೇಕೆಂದು ಚೇಳೂರು ತಾಲ್ಲುಕು ಗಾಣಿಗರ ಮುಖಂಡರಾದ ಜೆ.ಎನ್. ವೆಂಕಟರವಣಪ್ಪ ಮನವಿ ಮಾಡಿದ್ದಾರೆ.

ಅವರು ಚೇಳೂರುನಲ್ಲಿ ಗಾಣಿಗ ಸಮುದಾಯದ ಮುಖಂಡರೊಂದಿಗೆ ನಡೆದ ಪೂರ್ವ ಭಾವಿ ಸಭೆಯಲ್ಲಿ ಮಾತನಾಡಿದ ಅವರು, ಗಾಣಿಗರ ಹಬ್ಬ ಕಾರ್ಯುಕ್ರಮವನ್ನು ಸಿ.ಎಂ. ಸಿದ್ದರಾಮಯ್ಯ ಉದ್ಘಾಟನೆ ಮಾಡಲಿದ್ದು, ಡಿಸಿಎಂ. ಡಿ.ಕೆ. ಶಿವಕುಮಾರ್ ಸೇರಿದಂತೆ ವಿವಿಧ ಇಲಾಖೆಗಳ ಸಚಿವರು, ರಾಜಸಭಾ ಸದಸ್ಯರು, ವಿಧಾನಪರಿತ್ ಸದಸ್ಯರು, ಶಾಸಕರು, ಸೇರಿದಂತೆ ಇತರೆ ಗಣ್ಯವ್ಯಕ್ತಿಗಳು ಆಗಮಿಸಲಿದ್ದಾರೆ ಎಂದು ತಿಳಿಸಿದರು.

ವಿಶೇಷವಾಗಿ ಜನಾಂಗದ ಪ್ರಥಮ ಐಎಎಸ್ ಅಧಿಕಾರಿಯಾಗಿರುವ ಬೆಂಗಳೂರಿನ ವಿಶೇಷ ಜಿಲ್ಲಾಧಿಕಾರಿ ಡಾ. ಬಿ.ವಿ.ವಾಸಂತಿಅಮರ್ ಆಗಮಿಸಲಿದ್ದಾರೆ. ಸ್ವಾಗತ ಸಮಿತಿ ಅಧ್ಯಕ್ಷ ಜಿ.ಎನ್. ವೇಣುಗೋಪಾಲ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದಾರೆ.

ಗಾಣಿಗರ ಸಮುದಾಯದ ಏಕತೆ ಹಾಗೂ ಸಂಘಟನಾ ಶಕ್ತಿಯನ್ನು ಪ್ರದರ್ಶನ ಮಾಡುವ ಉದ್ದೇಶದಿಂದ ಹಾಗೂ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಸರ್ಕಾರ ವನ್ನು ಒತ್ತಾಯ




ಮಾಡಲು ಗಾಣಿಗರ ಹಬ್ಬವನ್ನು ಅತ್ಯಂತ ವೈಭವದಿಂದ ನಡೆಸಲಾಗುತ್ತಿದೆ ಸ್ವಾಮೀಜಿಗಳು ತಮ್ಮ ಸರ್ವಸ್ವವನ್ನು ತ್ಯಾಗ ಮಾಡಿ ಜನಾಂಗದ ಏಳಿಗೆಗಾಗಿ ಅಭಿವೃದ್ಧಿಗಾಗಿ ಶ್ರಮಿಸುತ್ತಿದ್ದು ಅವರಿಗೆ ನಮ್ಮ ಬೆಂಬಲ ನೀಡಬೇಕಾಗಿದೆ ಎಂದರು.

ಈ ಕಾರ್ಯಕ್ರಮ ಸಮಾಜದ ಹಬ್ಬವಾಗಿದ್ದು ಇದರಲ್ಲಿ ಪ್ರತಿಯೊಬ್ಬರು ಭಾಗವಹಿಸುವ ಮೂಲಕ ತಮ್ಮ ಒಗ್ಗಟ್ಟಿನ ಪ್ರದರ್ಶನ ಮಾಡಬೇಕಾಗಿದೆ ಸ್ವಾತಂತ್ರ ಬಂದು 77 ವರ್ಷಗಳು ಕಳೆದರೂ ಸಹ ಗಾಣಿಗ ಸಮುದಾಯ ಎಲ್ಲಾ ಕ್ಷೇತ್ರಗಳಲ್ಲೂ ಹಿಂದುಳಿದಿದೆ ರಾಜ್ಯದಲ್ಲಿ ಆಡಳಿತ ನಡೆಸಿದ ಸರಕಾರಗಳು ಹೆಚ್ಚಿನ ಕಾಳಜಿ ತೋರಿಸದೇ ಇರುವುದು ವಿಷಾದನೀಯ ಸಂಗತಿಯಾಗಿದೆ ಈಗಲಾದರೂ ಸಮುದಾಯ ಎಚ್ಚತ್ತುಕೊಂಡು ತಮ್ಮ ಹಕ್ಕುಗಳಿಗಾಗಿ ಹೋರಾಟ ಮಾಡಬೇಕಾಗಿದೆ ಎಣ್ಣೆ ತೆಗೆಯುವುದು ಗಾಣಿಗರ ಕುಲ ಕಸಬು ಆಗಿದ್ದು, ಅದರೆ ತಂತ್ರಜ್ಞಾನ ಬೆಳೆದಂತೆ ಈ ಕಸಬು ಕಣ್ಮರೆಯಾಗಿದೆ ಇದರಿಂದ ಬಹುತೇಕ ಕುಟುಂಬಗಳು ಆರ್ಥಿಕವಾಗಿ ಸಂಕಷ್ಟದಲ್ಲಿ ಇದ್ದಾರೆ ಅವರನ್ನು ಸ್ವಾವಲಂಭಿಗಳಾಗಿ ಮಾಡಲು ಸರಕಾರ ಪರ್ಯಾಯ ವೃತ್ತಿಯನ್ನು ಕಲ್ಪಿಸಲು ಅಗತ್ಯ ಕ್ರಮ ತೆಗೆದುಕೊಳ್ಳಬೇಕಾಗಿದೆ ಎಂದು ತಿಳಿಸಿದರು. ಗ್ರಾಮೀಣ ಪ್ರದೇಶಗಳಲ್ಲಿ ಈಗಲೂ ಗಾಣಿಗ ಸಮುದಾಯದವರಿಗೆ ಸೂರು ಇಲ್ಲದೆ ತುಂಬ ತೊಂದರೆ ಅನುಭವಿಸುವಂತಾಗಿದ್ದು ಸರಕಾರಗಳು ಈ ಬಗ್ಗೆ ಕ್ರಮ ತೆಗೆದುಕೊಳ್ಳಬೇಕಾಗಿದೆ ಎಂದು ತಿಳಿಸಿದರು.

ಪೂರ್ವಭಾವಿ ಸಭೆಯಲ್ಲಿ ಚೇಳೂರು ತಾಲ್ಲೂಕು ಗಾಣಿಗರ ಸಂಘದ ಜೆ.ವಿ.ಚಲಪತಿ. ಜೆ.ಕೆ.ರಾಮಚಂದ್ರ. ಜೆ.ಕೆ.ಆನಂದ್. ಜೆ.ಎಸ್.ನಾರಾಯಣಸ್ವಾಮಿ. ಜೆ.ಎನ್. ರಾಮಾಂಜಿ.ಜೆ.ವಿ.ಲೋಕೇಶ್. ಜನುಂಜಯ. ದೊಡ್ಡತೇಕಹಳ್ಳಿ ಗಗನ್ ಮುಂತಾದವರು ಉಪಸ್ಥಿತರಿದರು

# ವ್ಯವಸ್ಥಾಪನಾ ಸಮಿತಿ ಅಧ್ಯಕ್ಷರಾಗಿ ಜೆ.ಶ್ರೀನಿವಾಸ್ ಆಯ್ಕೆ

**ಯಳಂದೂರು:** ತಾಲೂಕಿನ ಪ್ರಸಿದ್ಧ ಪೌರಾಣಿಕ ಕ್ಷೇತ್ರವಾಗಿರುವ ಬಿಳಿಗಿರಿರಂಗನಬೆಟ್ಟದಲ್ಲಿರುವ ಶ್ರೀ ಬಿಳಿಗಿರಿರಂಗನಾಥಸ್ವಾಮಿ ದೇಗುಲದ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷರಾಗಿ ಜೆ. ಶ್ರೀನಿವಾಸ್‌ರನ್ನು ಒಮ್ಮತದಿಂದ ಆಯ್ಕೆ ಮಾಡಲಾಯಿತು.

ಈ ಸಂಬಂಧ ಬುಧವಾರ ಪಟ್ಟಣದ ಬಿಳಿಗಿರಿರಂಗನಾಥಸ್ವಾಮಿ ದೇಗುಲದ ಕಚೇರಿಯಲ್ಲಿ ಕಾರ್ಯನಿರ್ವಾಹಕ ಅಧಿಕಾರಿ ಮೋಹನ್‌ಕುಮಾರ್ ನೇತೃತ್ವದಲ್ಲಿ ನಡೆದ ಸಮಿತಿಯ ಮೊದಲ ಸಭೆಯಲ್ಲಿ ಜೆ. ಶ್ರೀನಿವಾಸ್‌ರನ್ನು ಎಲ್ಲರೂ ಒಮ್ಮತದಿಂದ ಅಧ್ಯಕ್ಷ ಗಾದಿಗೆ ಆಯ್ಕೆ ಮಾಡಿದರು. ಒಟ್ಟು ಈ ಸಮಿತಿಯಲ್ಲಿ 9 ಮಂದಿ ಸದಸ್ಯರು ಇದ್ದಾರೆ.

ನೂತನ ಅಧ್ಯಕ್ಷರಾಗಿ ಆಯ್ಕೆಯಾದ ಜೆ. ಶ್ರೀನಿವಾಸ್ ಮಾತನಾಡಿ, ಬಿಳಿಗಿರಿರಂಗನಬೆಟ್ಟದ ದೇವಸ್ಥಾನಕ್ಕೆ ಪೌರಾಣಿಕ ಹಿನ್ನೆಲೆ ಇದೆ. ಈ ದೇಗುಲ ಅತ್ಯಂತ ಪುರಾತನ ದೇಗುಲವಾಗಿದ್ದು ಪ್ರತಿ ವರ್ಷ ಲಕ್ಷಾಂತರ ಭಕ್ತರು ಇಲ್ಲಿಗೆ ಭೇಟಿ ನೀಡುತ್ತಾರೆ. ಅಲ್ಲದೆ ವರ್ಷದಲ್ಲಿ ಎರಡು ಬಾರಿ ಇಲ್ಲಿ ರಥೋತ್ಸವ ನಡೆಯುತ್ತದೆ. ಅಲ್ಲದೆ ಗಂಗಾಧರೇಶ್ವರನ ದೇಗುಲದಲ್ಲೂ ತೇರು ನಡೆಯುತ್ತದೆ. ದೇಶವಿದೇಶಗಳಿಂದಲೂ ಇಲ್ಲಿಗೆ ಭಕ್ತರು ಬರುತ್ತಾರೆ. ಇಲ್ಲಿಗೆ ಈಚೆಗೆ ಬರುವ ಭಕ್ತರ ಸಂಖ್ಯೆಯಲ್ಲಿ ಏರಿಕೆ ಕಂಡು ಬರುತ್ತಿದೆ. ಇಲ್ಲಿಗೆ ಬರುವ ಭಕ್ತರಿಗೆ ಮೂಲ



ಸವಲತ್ತುಗಳನ್ನು ನೀಡಲು ಇನ್ನಷ್ಟು ನೂತನ ಸವಲತ್ತುಗಳನ್ನು ನೀಡಲು ನಾನು ಪ್ರಮಾಣಿಕವಾಗಿ ಪ್ರಯತ್ನ ಮಾಡುತ್ತೇನೆ. ದೇಗುಲದ ಅಭಿವೃದ್ಧಿಗೆ ತೆಗೆದುಕೊಳ್ಳುವ ಎಲ್ಲಾ ನಿರ್ಧಾರಗಳಿಗೂ ನಾನು ಬದ್ಧನಾಗಿ ಕರ್ತವ್ಯ ನಿರ್ವಹಿಸುತ್ತೇನೆ. ಈ ಸಮಿತಿಯಲ್ಲಿ 9 ಜನ ಸದಸ್ಯರಿದ್ದು ಎಲ್ಲಾ ಸದಸ್ಯರ, ಸ್ಥಳೀಯ ಶಾಸಕರ ಹಾಗೂ ಚುನಾಯಿತಿ ಜನಪ್ರತಿನಿಧಿಗಳು ಎಲ್ಲಕ್ಕಿಂತ ಹೆಚ್ಚಾಗಿ ಭಕ್ತರು ಸೇರಿದಂತೆ ಎಲ್ಲರ ಸಲಹೆ ಸೂಚನೆಗಳನ್ನು ಪಡೆದುಕೊಂಡು ದೇಗುಲವನ್ನು ಇನ್ನಷ್ಟು ಅಭಿವೃದ್ಧಿ ಪಡಿಸಿ, ಬರುವ ಭಕ್ತರಿಗೆ ಸಕಲ ಸೌಲಭ್ಯಗಳನ್ನು ನೀಡಲು ಪ್ರಮಾಣಿಕವಾಗಿ ಶ್ರಮಿಸುತ್ತೇನೆ. ನನ್ನನ್ನು ಈ ಸ್ಥಾನಕ್ಕೆ ಒಮ್ಮತದಿಂದ ಆಯ್ಕೆ ಮಾಡಿದ ಎಲ್ಲರಿಗೂ ಕೃತಜ್ಞತೆಯನ್ನು ಸಲ್ಲಿಸುವುದಾಗಿ ತಿಳಿಸಿದರು.

ಈ ಸಂದರ್ಭದಲ್ಲಿ ಗ್ಯಾರಂಟಿ ಯೋಜನೆಯ ಅನುಷ್ಠಾನದ ಜಿಲ್ಲಾಧ್ಯಕ್ಷ ಎಚ್.ವಿ. ಚಂದ್ರು, ವ್ಯವಸ್ಥಾಪನಾ ಸಮಿತಿ ಸದಸ್ಯರಾದ ಗುಂಬಳ್ಳಿ ರಾಜಣ್ಣ, ಕೇತಮ್ಮ, ಸ್ಫೂರ್ತಿ, ವೆಂಕಟರಾಮು, ಸಿದ್ದರಾಜು, ಎಂ. ಸುರೇಶ್, ವಿ. ನಾರಾಯಣಸ್ವಾಮಿ, ಅರ್ಚಕ ರವಿಕುಮಾರ್ ಕಾರ್ಯನಿರ್ವಾಹಕ ಅಧಿಕಾರಿ ಮೋಹನ್‌ಕುಮಾರ್ ಪಾರುಪತ್ತೇದಾರ ರಾಜು, ಯರಿಯೂರು ನಾಗೇಂದ್ರ, ಕೃಷಿಕ ಸಮಾಜದ ಅಧ್ಯಕ್ಷ ಗೌಡಹಳ್ಳಿ ರವಿ, ಟಿಎಪಿಸಿಎಂಎಸ್ ನಿರ್ದೇಶಕ ಪುಟ್ಟರಾಜು, ವಿಜಯ್, ಸೇರಿದಂತೆ ಅನೇಕರು ಇದ್ದರು.

# ರೈತ ಸಂಘ ಹಸಿರು ಸೇನೆಗೆ ಅಧ್ಯಕ್ಷರಾಗಿ ದೇವಪ್ಪ ಆಯ್ಕೆ

**ಕುಕನೂರು:** ರೈತ ಸಂಘ ಹಸಿರು ಸೇನೆ ವಿ ಆರ್ ನಾರಾಯಣ ರೆಡ್ಡಿ ಬಣದ ಕುಕನೂರು ನೂತನ ಅಧ್ಯಕ್ಷರಾಗಿ ದೇವಪ್ಪ ಸೋಬಾನದ್ ಅವರನ್ನು ಆಯ್ಕೆ ಮಾಡಲಾಯಿತು.

ಪಟ್ಟಣದ ಇಟಗಿ ಮಸೂತಿ ಆವರಣದಲ್ಲಿ ರೈತ ಸಂಘದ ರಾಜ್ಯ ಉಪಾಧ್ಯಕ್ಷ ಅಂದಪ್ಪ ಹುರಳಿ ಮತ್ತು ಜಿಲ್ಲಾ ಪದಾಧಿಕಾರಿಗಳು ಮತ್ತು ತಾಲೂಕಿನ ರೈತ ಮುಖಂಡರ ಸಮ್ಮುಖದಲ್ಲಿ ದೇವಪ್ಪ ಸೋಬಾನದ್ ಅವರನ್ನು ನೂತನ ಅಧ್ಯಕ್ಷರನ್ನಾಗಿ ಆಯ್ಕೆ ಮಾಡಲಾಯಿತು.

ಈ ಸಂದರ್ಭದಲ್ಲಿ ಮಾತನಾಡಿದ ದೇವಪ್ಪ ಸೋಬಾನದ್ ಅವರು, ತಾಲೂಕಿನ ರೈತರ ಸಮಸ್ಯೆಗಳನ್ನು ಬಗೆಹರಿಸುವುದು, ರೈತರ ಬೇಡಿಕೆಗಳನ್ನು ಈಡೇರಿಸಲು ಸರ್ಕಾರದ ಗಮನಕ್ಕೆ ತರಲು ಶ್ರಮಿಸುವುದಾಗಿ ಹೇಳಿದರು. ಮುಖ್ಯವಾಗಿ ಬೆಂಬಲ ಬೆಲೆ, ಬೆಳೆ ವಿಮೆ, ಬೀಜ ಗೊಬ್ಬರ ಸೇರಿದಂತೆ ರೈತರ ಅಗತ್ಯ ಬೇಡಿಕೆಗಳನ್ನು ಮುಂದಿಟ್ಟು ಕೊಂಡು ಸಾಕಾಲದಲ್ಲಿ ನ್ಯಾಯ ಕೊಡಿಸಲು ಹೋರಾಟ ಮಾಡುವುದಾಗಿ ತಿಳಿಸಿದರು.

ಕುಕನೂರು ತಾಲೂಕು ನೂತನ ಪದಾಧಿಕಾರಿಗಳು:

ಅಧ್ಯಕ್ಷರು ದೇವಪ್ಪ ಸೋಬಾನದ್, ಗೌರವ ಅಧ್ಯಕ್ಷರು ಶರಣಪ್ಪ ಈಶಪ್ಪ ಚೆಂಡೂರು, ಉಪಾಧ್ಯಕ್ಷರು ಹನುಮಪ್ಪ ಮುರಡಿ, ಮಲ್ಲಪ್ಪ ಚಳ್ಳಮರದ್, ಪ್ರಧಾನ ಕಾರ್ಯದರ್ಶಿ ಫಕೀರಪ್ಪ ಯಡ್ಡೋಣಿ, ಸಂಘಟನಾ ಕಾರ್ಯದರ್ಶಿ ಶರಣಪ್ಪ ಯತ್ನಟ್ಟಿ, ಖಜಾಂಚಿ ಶಿವಪ್ಪ ಹಾದಿಮನಿ, ಕಾರ್ಯಧ್ಯಕ್ಷ ಫಕೀರಪ್ಪ ನಿಟ್ಟಾಲಿ, ಸಂಚಾಲಕರು ಶರಣಪ್ಪ ದಿವಟರ್, ಸಹಕಾರ್ಯದರ್ಶಿ ಉಮೇಶ್ ಬೆದವಟ್ಟಿ, ಅವರನ್ನು ಆಯ್ಕೆ ಮಾಡಲಾಯಿತು.


ರೈತ ಸಂಘ ಹಸಿರು ಸೇನೆ ವಿ ಆರ್ ನಾರಾಯಣ ರೆಡ್ಡಿ ಬಣದ ಕುಕನೂರು ನೂತನ ಅಧ್ಯಕ್ಷರಾಗಿ ದೇವಪ್ಪ ಸೋಬಾನದ್ ಅವರನ್ನು ಆಯ್ಕೆ ಮಾಡಲಾಯಿತು.

ಪಟ್ಟಣದ ಇಟಗಿ ಮಸೂತಿ ಆವರಣದಲ್ಲಿ ರೈತ ಸಂಘದ ರಾಜ್ಯ ಉಪಾಧ್ಯಕ್ಷ ಅಂದಪ್ಪ ಹುರಳಿ ಮತ್ತು ಜಿಲ್ಲಾ ಪದಾಧಿಕಾರಿಗಳು ಮತ್ತು ತಾಲೂಕಿನ ರೈತ ಮುಖಂಡರ ಸಮ್ಮುಖದಲ್ಲಿ ದೇವಪ್ಪ ಸೋಬಾನದ್ ಅವರನ್ನು ನೂತನ ಅಧ್ಯಕ್ಷರನ್ನಾಗಿ ಆಯ್ಕೆ ಮಾಡಲಾಯಿತು.

ಈ ಸಂದರ್ಭದಲ್ಲಿ ಮಾತನಾಡಿದ ದೇವಪ್ಪ ಸೋಬಾನದ್ ಅವರು, ತಾಲೂಕಿನ ರೈತರ ಸಮಸ್ಯೆಗಳನ್ನು ಬಗೆಹರಿಸುವುದು, ರೈತರ ಬೇಡಿಕೆಗಳನ್ನು ಈಡೇರಿಸಲು ಸರ್ಕಾರದ ಗಮನಕ್ಕೆ ತರಲು ಶ್ರಮಿಸುವುದಾಗಿ ಹೇಳಿದರು. ಮುಖ್ಯವಾಗಿ ಬೆಂಬಲ ಬೆಲೆ, ಬೆಳೆ ವಿಮೆ, ಬೀಜ ಗೊಬ್ಬರ ಸೇರಿದಂತೆ ರೈತರ ಅಗತ್ಯ ಬೇಡಿಕೆಗಳನ್ನು ಮುಂದಿಟ್ಟು ಕೊಂಡು ಸಾಕಾಲದಲ್ಲಿ ನ್ಯಾಯ ಕೊಡಿಸಲು ಹೋರಾಟ ಮಾಡುವುದಾಗಿ ತಿಳಿಸಿದರು.

ಕುಕನೂರು ತಾಲೂಕು ನೂತನ ಪದಾಧಿಕಾರಿಗಳು:

ಅಧ್ಯಕ್ಷರು ದೇವಪ್ಪ ಸೋಬಾನದ್, ಗೌರವ ಅಧ್ಯಕ್ಷರು ಶರಣಪ್ಪ ಈಶಪ್ಪ ಚೆಂಡೂರು, ಉಪಾಧ್ಯಕ್ಷರು ಹನುಮಪ್ಪ ಮುರಡಿ, ಮಲ್ಲಪ್ಪ ಚಳ್ಳಮರದ್, ಪ್ರಧಾನ ಕಾರ್ಯದರ್ಶಿ ಫಕೀರಪ್ಪ ಯಡ್ಡೋಣಿ, ಸಂಘಟನಾ ಕಾರ್ಯದರ್ಶಿ ಶರಣಪ್ಪ ಯತ್ನಟ್ಟಿ, ಖಜಾಂಚಿ ಶಿವಪ್ಪ ಹಾದಿಮನಿ, ಕಾರ್ಯಧ್ಯಕ್ಷ ಫಕೀರಪ್ಪ ನಿಟ್ಟಾಲಿ, ಸಂಚಾಲಕರು ಶರಣಪ್ಪ ದಿವಟರ್, ಸಹಕಾರ್ಯದರ್ಶಿ ಉಮೇಶ್ ಬೆದವಟ್ಟಿ, ಅವರನ್ನು ಆಯ್ಕೆ ಮಾಡಲಾಯಿತು.



# ತಾಲೂಕಿನ ಸಮಾಜ ಸೇವಕರನ್ನು ಗುರುತಿಸುವ ಕೆಲಸಕ್ಕೆ ಕೈಜೋಡಿಸಿ

**ಯಳಂದೂರು:** ತಾಲೂಕಿನ ಎಲ್ಲಾ ಜನಾಂಗಗಳಲ್ಲೂ ಸಾರ್ವಜನಿಕರಿಗೆ ಒಳ್ಳೆದಾಗಲಿ ಎಂದು ಅನೇಕ ಸಮಾಜ ಸೇವಕರಿದ್ದಾರೆ. ಇಂತಹ ಎಲ್ಲಾ ಜಾತಿ, ಧರ್ಮದ ವ್ಯಕ್ತಿಗಳನ್ನು ಗುರುತಿಸುವ ಕೆಲಸವನ್ನು ಸಮಾನ ಮನಸ್ಕರ ವೇದಿಕೆ ಮಾಡುತ್ತಿದ್ದು ಇದಕ್ಕೆ ಎಲ್ಲರೂ ಕೈ ಜೋಡಿಸಬೇಕು ಎಂದು ಕರ್ನಾಟ ರಾಜ್ಯ ವಿದ್ಯಾವಂತ ನಿರುದ್ಯೋಗಿಗಳ ಸಂಘದ ರಾಜ್ಯಾಧ್ಯಕ್ಷ ಕೂಡ್ಲೂರು ಶ್ರೀಧರ ಮೂರ್ತಿ ಕರೆ ನೀಡಿದರು.

ಅವರು ಬುಧವಾರ ಪಟ್ಟಣದ ಪ್ರವಾಸಿ ಮಂದಿರದಲ್ಲಿ ಕರೆದಿದ್ದ ಸಭೆಯಲ್ಲಿ ಭಾಗವಹಿಸಿ ಮಾತನಾಡಿದರು. ಶಾಲಾ, ಕಾಲೇಜು, ಆಸ್ಪತ್ರೆ, ವಿದ್ಯಾರ್ಥಿನಿಲಯ, ಆಟದ ಮೈದಾನ, ಸ್ಮಶಾನಗಳಿಗೆ ಸ್ಥಳವನ್ನು ದಾನ ನೀಡಿದ್ದಾರೆ. ಅನೇಕರು ಇದನ್ನು ಕಟ್ಟಿಸಲು ಸಹಾಯ ಮಾಡಿದ್ದಾರೆ.

ನಾವು ತಾಲೂಕಿನಲ್ಲಿ ರಾಜ್ಯ ಮಟ್ಟದ ಕಬಡ್ಡಿ ಅಥವಾ ವಾಲಿಬಾಲ್ ಪಂದ್ಯಾವಳಿಯನ್ನು ಆಯೋಜಿಸಲು ಯೋಜನೆಯನ್ನು ರೂಪಿಸುತ್ತಿದ್ದೇವೆ. ಈ ಸಂದರ್ಭದಲ್ಲಿ ತಾಲೂಕಿನಲ್ಲಿ ವಿವಿಧ ಸಮಾಜ ಸೇವಕರನ್ನು ಗುರುತಿಸುವ ಕೆಲಸವನ್ನು ಮಾಡಲಾಗುತ್ತಿದೆ. ಪ್ರತಿ ಗ್ರಾಮಗಳಿಗೂ ತೆರಳಿ ಈ ಬಗ್ಗೆ ಮಾಹಿತಿಯನ್ನು ಸಂಗ್ರಹಿಸಲಾಗುತ್ತಿದೆ.

ಅನೇಕರಿಗೆ ತಮ್ಮ ಪೂರ್ವಜರು ನೀಡಿರುವ



ದಾನ,ಧರ್ಮಗಳ ಅರಿವೆಯೇ ಇಲ್ಲ ಅಂತಹ ಕುಟುಂಬಗಳ ಬಗ್ಗೆಯೂ ನಮಗೆ ಮಾಹಿತಿ ಲಭ್ಯವಾಗಿದೆ. ಅವರನ್ನು ಈ ಕ್ರೀಡಾಕೂಟದಲ್ಲಿ ಸನ್ಮಾನಿಸುವ ಯೋಜನೆಯನ್ನು ರೂಪಿಸಲಾಗುತ್ತಿದೆ.

ಈ ಬಗ್ಗೆ ಚರ್ಚಿಸಲು ಜ. 10 ರಂದು ಗಂಟೆಗೆ ಪಟ್ಟಣದ ಷಡಕ್ಷರ ದೇವರ ಗದ್ದುಗೆಯ ಬಳಿ ತಾಲೂಕಿನ ಸರ್ವಜನಾಂಗದ ಸಭೆಯನ್ನು ಕರೆಯಲು ಉದ್ದೇಶಿಸಲಾಗಿದೆ.

ಈಗಾಗಲೇ ಅನೇಕ ಗ್ರಾಮಗಳಿಗೆ ತೆರಳಿ ಖುದ್ದು ಮುಖಂಡರನ್ನು ಭೇಟಿಯಾಗಿ ಇದಕ್ಕೆ ಆಹ್ವಾನಿಸಲಾಗಿದೆ. ದೊಡ್ಡ ಮಟ್ಟದಲ್ಲಿ ಈ ಕ್ರೀಡಾಕೂಟಕ್ಕೆ ಯೋಜನೆ ರೂಪಿಸಲಾಗುತ್ತಿದ್ದು. ಇದರೊಂದಿಗೆ ಸೇವಾ ಕಾರ್ಯವನ್ನು ಮಾಡುವುದು ನಮ್ಮ ಉದ್ದೇಶವಾಗಿದೆ. ಹಾಗಾಗಿ ಸಮಾನ ಮನಸ್ಕರ ವೇದಿಕೆಯೊಂದಿಗೆ ಕರ್ನಾಟಕ ರಾಜ್ಯ ವಿದ್ಯಾವಂತ ನಿರುದ್ಯೋಗಿಗಳ ಸಂಘದ ವತಿಯಿಂದ ಫೆಬ್ರವರಿ ತಿಂಗಳಲ್ಲಿ ಇದನ್ನು ಆಯೋಜಿಸಲು ತೀರ್ಮಾನಿಸಲಾಗಿದೆ. ಹಾಗಾಗಿ ತಾಲೂಕಿನ ಎಲ್ಲಾ ಗ್ರಾಮದ ಪ್ರಮುಖರು ಈ ಸಭೆಯಲ್ಲಿ ಭಾಗವಹಿಸಬೇಕು ಎಂದು ಮನವಿ ಮಾಡಿದರು.

ಸೋಮಶೇಖರ್, ಸುಬ್ಬು, ಪುಟ್ಟಮಾದಯ್ಯ, ಬಸವರಾಜು, ಚಂದ್ರಶೇಖರ್, ಡಾ. ದೊಡ್ಡರಾಜು, ಮಹದೇವಯ್ಯ, ರಾಜಶೇಖರ್, ಲಿಂಗರಾಜು, ನಂಜುಂಡಸ್ವಾಮಿ, ಬಸವಣ್ಣ ಸೇರಿದಂತೆ ಅನೇಕರು ಇದ್ದರು.

# ರೈತರಿಗೆ ಅನುಕೂಲವಾಗುವಂತೆ ರಾಷ್ಟ್ರೀಕೃತ ಬ್ಯಾಂಕ್‌ಗಳ ತೆರೆಯಿರಿ

**ಚೇಳೂರು:** ರಾಷ್ಟ್ರೀಕೃತ ಬ್ಯಾಂಕುಗಳು ಇಲ್ಲದೆ ಸುಮಾರು 55 ಗ್ರಾಮದ ರೈತರಿಗೆ ಹಾಗೂ ಕೃಷಿ ಕಾರ್ಮಿಕರಿಗೆ ಮಾತ್ರ ಯವುದೇ ಸೌಲಭ್ಯಗಳು ಸಿಗದೆ ರೈತರು ತೊಂದರೆ ಅನುಭವಿಸುತ್ತಿದ್ದು ಇನ್ನು ಮುಂದೆಯಾದರೂ ಅವರಿಗೆ ಅನುಕೂಲವಾಗುವಂತೆ ರಾಷ್ಟ್ರೀಕೃತ ಬ್ಯಾಂಕ್‌ಗಳನ್ನು ತೆರೆಯಬೇಕು ಎಂದು ಕಾಂಗ್ರೆಸ್ ಮುಖಂಡ ಎಂ.ವಿ.ವೆಂಕಟರವಣಪ್ಪ ಒತ್ತಾಯಿಸಿದ್ದಾರೆ.



ಈ ಕುರಿತು ಪತ್ರಿಕೆ ಹೇಳಿಕೆ ನೀಡಿರುವ ಅವರು ಬಾಗೇಪಲ್ಲಿ, ಮತ್ತು ಚೇಳೂರು ತಾಲೂಕಿನ ಸೋಮನಾಥಪುರ, ನಾರೇಮದೇಪಲ್ಲಿ, ತೊಳ್ಳಪಲ್ಲಿ ಮತ್ತು ಎಂ.ನಲ್ಲಗುಟ್ಲಪಲ್ಲಿ ಗ್ರಾಮ ಪಂಚಾಯ್ತಿಗಳಿಗೆ ಸೇರಿದ ಸುಮಾರು 55 ಗ್ರಾಮಗಳಿಗೆ ಸರ್ಕಾರಿ ಬ್ಯಾಂಕ್ ಸೌಲಭ್ಯ ವಿಲ್ಲದೆ ಗ್ರಾಮಗಳ ಪ್ರಗತಿಪರ ರೈತರಿಗೆ ಮತ್ತು ಕೃಷಿ ಕಾರ್ಮಿಕರಿಗೆ ಮತ್ತು ಸ್ತ್ರೀ ಶಕ್ತಿ ಸಂಘದ ಮಹಿಳೆಯರಿಗೆ ಹಾಗೂ ವಿದ್ಯಾರ್ಥಿಗಳಿಗೆ ಮತ್ತು ಅನೇಕ ಸಂಘದ ಹಾಗೂ ಕಸುಬುದಾರರಿಗೆ ಬಹಳ ತೊಂದರೆ ಆಗುತ್ತಿದೆ, ಪಾತಪಾಳ್ಯದ ಕೊಟೆಕ್ ಮಹೇಂದ್ರ ಬ್ಯಾಂಕ್ ಇದ್ದರೂ ರೈತರಿಗೆ ಕೃಷಿ ಕಾರ್ಮಿಕರಿಗೆ ಪ್ರಯೋಜನವಿಲ್ಲದ ರೀತಿ ಕಾರ್ಯ ನಿರ್ವಹಿಸುತ್ತಿದೆ, ರೈತರಿಗಾಗಲ್ಲಿ, ಕೃಷಿ ಕಾರ್ಮಿಕರಿಗಾಗಲೀ ಸಾಲ ಸೌಲಭ್ಯ ವಿಲ್ಲದೆ ಬಹಳ ತೊಂದರೆ ಆಗಿದೆ, ಸರ್ಕಾರಿ ಸೌಲಭ್ಯಗಳನ್ನು ಅನುಷ್ಠಾನ ಮೊಡಲು ಬಹಳ ತೊಂದರೆ ಆಗಿದೆ ಎಂದರು.

ಚೇಳೂರುನಲ್ಲಿರುವ ಪ್ರಗತಿ ಕೃಷ್ಣ ಬ್ಯಾಂಕ್ ಚೇಳೂರು, ಪಾಳ್ಯಕೆರೆ ಗ್ರಾಮ ಪಂಚಾಯಿತಿಗಳಿಗೆ ಮಾತ್ರ ಸೀಮಿತವಾಗಿದೆ, ಚಾಕವೇಲ್, ಕೆನರಾಬ್ಯಾಂಕ್ ಚಾಕವೇಲ್ ನಲ್ಲಗುಟ್ಲಪಲ್ಲಿ ಪಂಚಾಯಿತಿಗೆ ಸೀಮಿತವಾಗಿದೆ ಆದ್ದರಿಂದ ಸೋನಾಥಪುರದಲ್ಲಿ ರಾಷ್ಟ್ರೀಕೃತ ಸ್ಟೇಟ್ ಬ್ಯಾಂಕ್, ಮಂಜೂರು ಮಾಡಿಸಬೇಕಾಗಿದೆ ಎಂದು ಒತ್ತಾಯಿಸಿದ್ದರು.

# ನೂತನ ಆಟದ ಮೈದಾನಕ್ಕೆ ಶಾಸಕರಿಂದ ಚಾಲನೆ

**ಶಿರಾ:** ತಾಲೂಕು ರತ್ನಸಂದ್ರ ಗ್ರಾಮ ಪಂಚಾಯತಿ ವತಿಯಿಂದ ದೊಡ್ಡ ಗೂಳ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ನೂತನವಾಗಿ ನಿರ್ಮಿಸಿರುವ ಸಿಂಥೆಟಿಕ್ ವಾಲಿಬಾಲ್ ಮೈದಾನವನ್ನು ರಾಜ್ಯ ಸರ್ಕಾರದ ದೆಹಲಿ ವಿಶೇಷ ಪ್ರತಿನಿಧಿ ಶಾಸಕ ಟ.ಬಿ.ಜಯಚಂದ್ರ ಉದ್ಘಾಟಿಸಿದರು.

ಉದ್ಘಾಟನೆ ವೇಳೆಯಲ್ಲಿ ಭಾಗವಹಿಸಿದ ಶಾಸಕ, ಸ್ವತಃ ವಾಲಿಬಾಲ್ ಪಟು ಕೂಡ ಆಗಿದ್ದು, ವಾಲಿಬಾಲ್ ಆಟ ಆಡುವ ಮೂಲಕ ಆಟದ ಮೈದಾನಕ್ಕೆ ಚಾಲನೆ ನೀಡಿದರು. ಆರಂಭದ ವೇಳೆ ಸರ್ವೀಸ್ ಮಾಡಿದರು.

ಕ್ರೀಡೆ ಬದುಕಿನ ಅವಿಭಾಜ್ಯ ಅಂಗವಾಗಿದ್ದು ಮುಂದಿನ ದಿನಗಳಲ್ಲಿ ಕ್ಷೇತ್ರದಲ್ಲಿ ಇಂತಹ ಹಲವು ಸಿಂಥೆಟಿಕ್ ಟ್ರ್ಯಾಕ್ ನಿರ್ಮಾಣ ಮಾಡುವ ಉದ್ದೇಶ ಹೊಂದಿದ್ದು ತಾಲ್ಲೂಕಿನ ಯುವಕರು ದೇಶ, ವಿದೇಶದಲ್ಲಿ ನಮ್ಮ ತಾಲ್ಲೂಕಿನ ಹೆಸರನ್ನು ಎತ್ತರಕ್ಕೆ ಕೊಂಡಯ್ಯಲಿ ಎಂಬುದು ನನ್ನ ಬಯಕೆ ಎಂದರು.

ನಂತರ ಅವರು ದೊಡ್ಡಗೂಳ ಕೆರೆ ಹೇಮಾವತಿ ನೀರಿನಿಂದ ತುಂಬಿರುವ ಹಿನ್ನೆಲೆಯಲ್ಲಿ ಧರ್ಮಪತ್ನಿ ನಿರ್ಮಲಾ,ಗ್ರಾಮಸ್ಥರು ಹಾಗೂ ಮುಖಂಡರು ಕಾರ್ಯಕರ್ತರ ಜೊತೆಗೂಡಿ ಗಂಗಾಪೂಜೆ ನೆರವೇರಿಸಿ ಬಾಗೀನ ಸಲ್ಲಿಸಿದರು ಈ ಸಂದರ್ಭದಲ್ಲಿ ದೊಡ್ಡಗೂಳ ಗ್ರಾಮಕ್ಕೆ ನೂತನ ಕೆ.ಎಸ್.ಆರ್.ಟಿ.ಸಿ ಬಸ್ ವ್ಯವಸ್ಥೆಗೆ ಚಾಲನೆ ನೀಡಿ ಪ್ರಯಾಣಿಸಿ. ಪದ್ಮಾಪುರ ಗ್ರಾಮದಲ್ಲಿ ಜಲ ಜೀವನ್ ಮಿಷನ್ ಅಡಿಯಲ್ಲಿ ಪೂರ್ಣಗೊಂಡ ಮನೆ ಮನೆ ಗಂಗೆ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.ಈ ಸಂದರ್ಭದಲ್ಲಿ ಅನೇಕ ಗಣ್ಯರು, ಮುಖಂಡರು ಉಪಸ್ಥಿತರಿದ್ದರು.



# ಕ್ಯಾಲಿಪೋರ್ನಿಯಾದಲ್ಲಿ ಕಾಡ್ಗಿಚ್ಚಿನ ರುದ್ರನರ್ತನ ಸಾವಿರಾರು ಕಟ್ಟಡಗಳು ಬೆಂಕಿಗಾಹುತಿ

**ಕ್ಯಾಲಿಪೋರ್ನಿಯಾ:** ಅಮೆರಿಕದ ಕ್ಯಾಲಿಫೋರ್ನಿಯಾದಲ್ಲಿ ಕೆಟ್ಟ ಹವಾಮಾನದಿಂದಾಗಿ ಮಾಲಿಬುವಿ ಎಂಬಲ್ಲಿನ ಉತ್ತರದ ಬೆಟ್ಟಗಳಲ್ಲಿ ಬೆಂಕಿ ಕಾಣಿಸಿಕೊಂಡಿದ್ದು, ಪೆಸಿಫಿಕ್ ಪಾಲಿಸೇಡ್ಸ್‌ನಲ್ಲಿರುವ ಮನೆಗಳಿಗೆ ವಿನಾಶದ ಬೆದರಿಕೆ ಉಂಟಾಗಿದೆ. ಪಾಲಿಸೇಡ್ಸ್ ಬೆಂಕಿ ಇನ್ನೂ ನಿಯಂತ್ರಣಕ್ಕೆ ಬಂದಿಲ್ಲ. ಬೀಸುತ್ತಿರುವ ಬಲವಾದ ಗಾಳಿ ನಿಲ್ಲದೇ ಇದ್ದರೆ ಕಾಡ್ಗಿಚ್ಚು ಇನ್ನಷ್ಟು ಅಪಾಯಕಾರಿಯಾಗಬಹುದು ಎಂದು ಹೇಳಲಾಗುತ್ತಿದೆ.



70 ಸಾವಿರಕ್ಕೂ ಹೆಚ್ಚು ಜನರ ಸ್ಥಳಾಂತರ: ತುರ್ತು ರಕ್ಷಣಾ ಸಿಬ್ಬಂದಿ ಕಾಡ್ಗಿಚ್ಚು ಬಾಧಿತ ಪ್ರದೇಶಗಳಲ್ಲಿ ವಾಸಿಸುತ್ತಿದ್ದ 70 ಸಾವಿರಕ್ಕೂ ಹೆಚ್ಚು ಜನರನ್ನು ಸುರಕ್ಷಿತ ಸ್ಥಳಗಳಿಗೆ ಸ್ಥಳಾಂತರಿಸಿದೆ.

ಸಾವಿರಾರು ಕಟ್ಟಡಗಳು ಬೆಂಕಿ ಕೆನ್ನಾಲಿಗೆಗೆ ಸಿಲುಕಿ ಸುಟ್ಟು ಹೋಗಿವೆ. ಲಾಸ್ ಏಂಜಲೀಸ್ ಅಗ್ನಿಶಾಮಕ ಇಲಾಖೆ ಈಗಾಗಲೇ ಕಾಡ್ಗಿಚ್ಚುಪೀಡಿತ ಪ್ರದೇಶಗಳಲ್ಲಿ ಮತ್ತು ಸುತ್ತಮುತ್ತ ಸ್ಟ್ರೈಕ್ ಟೀಂಗಳನ್ನು ನಿಯೋಜಿಸಿದೆ. ಅಗ್ನಿಶಾಮಕ ದಳದ ನಿರಂತರವಾಗಿ ಬೆಂಕಿ ನಂದಿಸುವಲ್ಲಿ ಸಕ್ರಿಯವಾಗಿದೆ.

ಕಾಡ್ಗಿಚ್ಚಿಗೆ ಕಾರಣವೇನು?: ಕಡಿಮೆ ಆರ್ದ್ರತೆ ಮತ್ತು ನಿರಂತರ ಬರ ಪರಿಸ್ಥಿತಿಗಳು ಪಾಲಿಸೇಡ್ಸ್ ಕಾಡ್ಗಿಚ್ಚಿಗೆ ಕಾರಣವೆಂದು ಹೇಳಲಾಗುತ್ತಿದೆ. ಬಲವಾಗಿ ಬೀಸುವ ಸಾಂತಾ ಅನಾ ಗಾಳಿ ಬೆಂಕಿ ವೇಗವಾಗಿ ವ್ಯಾಪಿಸಲು ಕಾರಣವಾಗುತ್ತಿದೆ. ಸದ್ಯ ಗಾಳಿಯ ವೇಗ ಗಂಟೆಗೆ 80 ಮೈಲುಗಳಷ್ಟಿದೆ. ಪಾಲಿಸೇಡ್ಸ್ ಕಾಡ್ಗಿಚ್ಚು ಮಂಗಳವಾರ ಬೆಳಿಗ್ಗೆ ನಾರ್ತ್ ಪಿಯೆಡ್ರಾ ಮೊರಾಡಾ ಡ್ರೈವ್‌ನಲ್ಲಿ ಮೊದಲು ವರದಿಯಾಗಿತ್ತು. ಲಾಸ್ ಏಂಜಲೀಸ್ ಅಗ್ನಿಶಾಮಕ ಇಲಾಖೆಯ ಪ್ರಕಾರ, ಮಧ್ಯಾಹ್ನದ ವೇಳೆಗೆ ಜೋರಾಗಿ ಗಾಳಿ ಬೀಸಿದ್ದರಿಂದ ಬೆಂಕಿ 200 ಎಕರೆಗೂ ಹೆಚ್ಚು ಪ್ರದೇಶಕ್ಕೆ ಹರಡಿದೆ.

ಸಮರೋಪಾದಿಯಲ್ಲಿ ಸ್ಥಳಾಂತರ ಕಾರ್ಯ: ಜನರನ್ನು ದೊಡ್ಡ ಪ್ರಮಾಣದಲ್ಲಿ ಸ್ಥಳಾಂತರಿಸುವ ಕೆಲಸ ನಡೆಯುತ್ತಿದೆ. ಬೀದಿಗಳಲ್ಲಿ ಆಸ್ಪತ್ರೆಯ ಹಾಸಿಗೆಗಳು, ವೀಲ್‌ಚೇರ್‌ಗಳು ಮತ್ತು ಪ್ರದೇಶದಲ್ಲಿ ಹೆಚ್ಚಿನ ಸಂಖ್ಯೆಯ ಸಿಬ್ಬಂದಿ ಇರುವ ವಿಡಿಯೋ ವೈರಲ್ ಆಗುತ್ತಿದೆ.

ಜನರನ್ನು ಎಲ್ಲಿಗೆ ಕರೆದೊಯ್ಯಲಾಗುತ್ತದೆ ಎಂಬುದು ಸ್ಪಷ್ಟವಾಗಿಲ್ಲ. ಆದರೆ ಅಧಿಕಾರಿಗಳು ಜನರನ್ನು ಸ್ಥಳಂತರಿಸಲು ಸಾಮಾನ್ಯವಾಗಿ ಬಳಸುವ ಸೇನೆಯ ಶಸ್ತ್ರಸಜ್ಜಿತ ವಾಹನಗಳೂ ಸೇರಿದಂತೆ ಇತರೆ ವಾಹನಗಳನ್ನು ಬಳಸಲು ಪ್ರಯತ್ನಿಸುತ್ತಿದ್ದಾರೆ ಎಂದು ಮಾಧ್ಯಮಗಳು ವರದಿ ಮಾಡಿವೆ.

2 ಲಕ್ಷ ಜನರ ಮನೆಗಳಿಗೆ ವಿದ್ಯುತ್ ಸಂಪರ್ಕ ಕಡಿತ: ಲಾಸ್ ಏಂಜಲೀಸ್ ಕೌಂಟಿಯಲ್ಲಿ ವಿದ್ಯುತ್ ಕಡಿತಗೊಂಡಿದೆ. ವಿದ್ಯುತ್ ಸಂಪರ್ಕ ಇಲ್ಲದೇ ಜನರು ಕಂಗಾಲಾಗಿದ್ದಾರೆ. ವಿದ್ಯುತ್ ಕಡಿತ ಟ್ರ್ಯಾಕಿಂಗ್ ವೆಬ್‌ಸೈಟ್ ಕಂತಿಜಡಿಔಣಾಣಚಿಂಜ.ಛಿ ಪ್ರಕಾರ, ಸುಮಾರು 2 ಲಕ್ಷಕ್ಕೂ ಅಧಿಕ ಜನರ ಮೇಲೆ ತೀವ್ರ ಪರಿಣಾಮವಾಗಿದೆ.

ನೆರೆಯ ಸ್ಯಾನ್ ಬರ್ನಾರ್ಡಿನೊ ಕೌಂಟಿಯಲ್ಲಿ ನಿವಾಸಿಗಳು ಸಾಂತಾ ಅನಾ ಗಾಳಿಯಿಂದ ತತ್ತರಿಸಿದ್ದಾರೆ. ಇಲ್ಲಿ ಸುಮಾರು 13,600 ನಿವಾಸಿಗಳ ಮೇಲೆ ವಿದ್ಯುತ್ ಕಡಿತ ಪ್ರಭಾವ ಬೀರಿದೆ. ರಾತ್ರಿಯಿಡೀ ಬಲವಾದ ಗಾಳಿ ಬೀಸಿದರೆ ಮರಗಳು, ವಿದ್ಯುತ್ ಕಂಬಗಳು ಧರೆಗುರುಳುವ ಸಾಧ್ಯತೆ ಹೆಚ್ಚಾಗಿದೆ. ಪರಿಣಾಮ, ರಸ್ತೆ ಮಾರ್ಗಗಳು ಬಂದ್ ಆಗುವ ಸಾಧ್ಯತೆ ಇದೆ ಎಂದು ಅಧಿಕಾರಿಗಳು ಎಚ್ಚರಿಸಿದ್ದಾರೆ.

# ಉಗ್ರರಿರುವ ಹೈ ಸೆಕ್ಯುರಿಟಿ ಸೆಲ್ ಬಳಿ ಚೀನಾ ಡ್ರೋನ್ ಪತ್ತೆ

**ಭೋಪಾಲ್:** ಭೋಪಾಲ್‌ನ ಕೇಂದ್ರ ಕಾರಾಗೃಹದ ಹೈ ಸೆಕ್ಯುರಿಟಿ ಸೆಲ್ ಬಳಿ ಅನುಮಾನಾಸ್ಪದ ಡ್ರೋನ್ ಪತ್ತೆಯಾಗಿದೆ. ಚೀನಾ ನಿರ್ಮಿತ ಡ್ರೋನ್ ಭದ್ರತಾ ಸೆಲ್‌ಗಳ ಬಳಿ ಬಿದ್ದಿರುವುದು ಕಂಡುಬಂದಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಗಸ್ತು ಸಿಬ್ಬಂದಿಯೊಬ್ಬರು ಡ್ರೋನ್ ಅನ್ನು ಹೆಚ್ಚಿನ ಅಪಾಯದ ಸೆಲ್‌ಗಳ ಹೊರಗೆ ನೆಲದ ಮೇಲೆ ಬಿದ್ದಿರುವುದನ್ನು ಪತ್ತೆ ಮಾಡಿದ್ದಾರೆ.

ಆ್ಯಂಡಾ ಸೆಲ್ ಎಂದೂ ಕರೆಯುತ್ತಾರೆ, ಇದು ಭಯಾನಕ ಗ್ಯಾಂಗ್‌ಸ್ಟರ್ ಮತ್ತು ಭಯೋತ್ಪಾದಕರನ್ನು ಹೊಂದಿರುವ ಸೆಲ್ ಆಗಿದೆ. ಘಟನೆಯಿಂದ ಗಾಬರಿಗೊಂಡ ಗಾರ್ಡ್ ಹಿರಿಯ ಮತ್ತು ಇತರ ಜೈಲು ಅಧಿಕಾರಿಗಳಿಗೆ ಎಚ್ಚರಿಕೆ ನೀಡಿದರು. ಬಳಿಕ ಡ್ರೋನ್ ಅನ್ನು ಪರೀಕ್ಷೆಗಾಗಿ ಜೈಲು ಅಧೀಕ್ಷಕರ ಕಚೇರಿಗೆ ತರಲಾಯಿತು.

ಆರಂಭಿಕ ತನಿಖೆಯಲ್ಲಿ ಡ್ರೋನ್ ಎರಡು ಲೆನ್ಸ್‌ಗಳನ್ನು ಹೊಂದಿರುವ ಹಗುರವಾದ ಚೈನೀಸ್ ಮಾಡೆಲ್ ಎಂದು ತಿಳಿದುಬಂದಿದೆ ಎಂದು ಪೊಲೀಸ್ ಅಧಿಕಾರಿಗಳು ತಿಳಿಸಿದ್ದಾರೆ. ಪ್ರಸ್ತುತ, ಭೋಪಾಲ್‌ನ ತಾಂತ್ರಿಕ ತಜ್ಞರು ಅದರ ಮೂಲವನ್ನು ಪತ್ತೆಹಚ್ಚಲು ಡ್ರೋನ್ ಅನ್ನು ವಿಶ್ಲೇಷಿಸುತ್ತಿದ್ದಾರೆ.

ಭೋಪಾಲ್ ಸೆಂಟ್ರಲ್ ಜೈಲು ದೇಶದ ಅತ್ಯಂತ ಸೂಕ್ಷ್ಮ ಜೈಲುಗಳಲ್ಲಿ ಒಂದಾಗಿದೆ. 70 ಉಗ್ರರನ್ನು ಇಲ್ಲಿ ಇರಿಸಲಾಗಿದೆ. ಖಿಖಬಖಿ, ಊದಥ ಣಣ-ಖಿಚುಡುಡಿ, ಕಈಖಿ, ಖಿಖಿಖಿ ಮತ್ತು ಜಮಾತ್-ಉಲ್-ಮುಜಾಹಿದೀನ್ ಬಾಂಗ್ಲಾದೇಶನಂತಹ ಸಂಘಟನೆಗಳ 70 ಭಯೋತ್ಪಾದಕರನ್ನು ಜೈಲಿನ ಹೈ-ಸೆಕ್ಯುರಿಟಿ ಸೆಲ್‌ಗಳಲ್ಲಿ ಇರಿಸಲಾಗಿದೆ.

# ಹಿಂದೂ ಧರ್ಮದ ಮೇಲಿನ ಪ್ರೀತಿ ಮಹಾ ಕುಂಭಮೇಳಕ್ಕೆ ಕರೆ ತಂದಿದೆ: ಪ್ಯಾಸ್ಕಲ್

**ಪ್ರಯಾಗ್‌ರಾಜ್:** ನನಗೆ ಹಿಂದೂ ಧರ್ಮ ಮತ್ತು ಶಿವನ ಮೇಲೆ ಅಪಾರ ಪ್ರೀತಿ, ಭಕ್ತಿ ಇದೆ. ಹಿಂದೂ ಧರ್ಮಕ್ಕೆ ನನ್ನ ಮನಸ್ಸಿನಲ್ಲಿ ವಿಶೇಷ ಪ್ರೀತಿ ಇದೆ ಎಂದು ಪ್ಯಾಸ್ಕಲ್ ತಿಳಿಸಿದ್ದಾರೆ.



ಮಹಾ ಕುಂಭಮೇಳದಲ್ಲಿ ಭಾಗವಹಿಸಲು 65 ವರ್ಷದ ಫ್ರೆಂಚ್ ಮಹಿಳೆ ಪ್ಯಾಸ್ಕಲ್ ಎಂಬವರು ಪ್ರಯಾಗ್‌ರಾಜ್‌ಗೆ ಆಗಮಿಸಿದ್ದಾರೆ.

ಬಾಲ್ಯದಿಂದಲೇ ಹಿಂದೂ ಧರ್ಮದ ಕಡೆಗೆ ಆಕರ್ಷಿತರಾಗಿದ್ದ ಇವರು, ಶಿವನನ್ನು ತನ್ನ ಆರಾಧ್ಯ ದೈವವೆಂದು ಪರಿಗಣಿಸುತ್ತಾರೆ. ಅಷ್ಟೇ ಅಲ್ಲದೇ, ಭಗವದ್ಗೀತೆ ಮತ್ತು ಪುರಾಣಗಳ ಕುರಿತು ಜ್ಞಾನ ಹೊಂದಿದ್ದಾರೆ.

ಪ್ಯಾಸ್ಕಲ್ ಅವರ ಹಿಂದೂ ಧರ್ಮದೊಂದಿಗಿನ ಸಂಬಂಧ 1984ರಷ್ಟು ಹಿಂದಿನದ್ದು. ಮೊದಲ ಬಾರಿಗೆ ಭಾರತಕ್ಕೆ ಭೇಟಿ ನೀಡಿದಾಗಲೇ ಹಿಂದೂ ಧರ್ಮದೆಡೆಗೆ ಆಕರ್ಷಿತರಾಗಿದ್ದರಂತೆ. ಸನಾತನ ಸಂಪ್ರದಾಯದಿಂದ ಅವರು ಪ್ರಭಾವಿತರಾಗಿದ್ದಾರೆ.

"ನನಗೆ ಮಹಾ ಕುಂಭಮೇಳದ ಸಾಕಷ್ಟು ವಿಚಾರಗಳು ತಿಳಿದಿವೆ. ಸಮುದ್ರ ಮಂಥನದ ಬಗ್ಗೆಯೂ ಸಂಪೂರ್ಣ ಮಾಹಿತಿ ಇದೆ. ನನಗೆ ಇಲ್ಲಿ ಸಾಧುಗಳು, ಸನ್ಯಾಸಿಗಳು ಮತ್ತು ಹಿಂದೂಗಳನ್ನು ಭೇಟಿಯಾಗುವುದು ಇಷ್ಟ" ಎಂದರು.

ಪ್ಯಾಸ್ಕಲ್ ತನ್ನ ಸ್ನೇಹಿತನಿಂದ ಪಡೆದ ಉಡುಗೊರೆಯಾದ ರುದ್ರಾಕ್ಷಿ ಮಾಲೆಯನ್ನು ತೋರಿಸಿದರು. "ನಾನು ನನ್ನ ಕುತ್ತಿಗೆಯಲ್ಲಿ ರುದ್ರಾಕ್ಷಿ ಮಾಲೆ ಧರಿಸಿದ್ದೇನೆ. ಅದನ್ನು ನನ್ನ ಸ್ನೇಹಿತ ಉಡುಗೊರೆಯಾಗಿ ನೀಡಿದ್ದಾರೆ. ಅದನ್ನು ಧರಿಸಿದಾಗ ಅದು ನನ್ನನ್ನು ರಕ್ಷಿಸುತ್ತದೆ ಎಂದು ನನಗನಿಸುತ್ತದೆ" ಎಂದು ತಿಳಿಸಿದರು.

ಮಹಾ ಕುಂಭಮೇಳದಲ್ಲಿನ ವ್ಯವಸ್ಥೆಗಳನ್ನು ಶ್ಲಾಘಿಸಿದ ಅವರು, "ಭದ್ರತೆ, ಉಚಿತ ವಸತಿ, ಆಹಾರ ಮತ್ತು ಪಾನೀಯಗಳ ವ್ಯವಸ್ಥೆ ಚೆನ್ನಾಗಿದೆ. ಕೋಟ್ಯಂತರ ಜನರು ಇಲ್ಲಿಗೆ ಬರುತ್ತಿದ್ದಾರೆ. ನಾನು ಇಲ್ಲಿ ತುಂಬಾ ಸುರಕ್ಷಿತವಾಗಿದ್ದೇನೆ ಎಂದು ಭಾವಿಸುತ್ತೇನೆ. ಇಲ್ಲಿ ಉಳಿಯಲು ಉಚಿತ ವಸತಿ, ಉಚಿತ ಆಹಾರ ಮತ್ತು ಪಾನೀಯಗಳನ್ನು ಮಾಡಿದ್ದಾರೆ. ಎಲ್ಲಾ ವ್ಯವಸ್ಥೆಗಳು ತುಂಬಾ ಚೆನ್ನಾಗಿವೆ" ಎಂದರು.

ವಿಶ್ವದ ಅತಿದೊಡ್ಡ ಆಧ್ಯಾತ್ಮಿಕ ಕಾರ್ಯಕ್ರಮ ಮಹಾಕುಂಭಮೇಳವನ್ನು ಪ್ರತಿ 12 ವರ್ಷಕ್ಕೊಮ್ಮೆ ಆಚರಿಸಲಾಗುತ್ತದೆ. ಜನವರಿ 13ರಿಂದ ಫೆಬ್ರವರಿ 26ರವರೆಗೆ ಪ್ರಯಾಗ್‌ರಾಜ್‌ನಲ್ಲಿ ಅಪಾರ ಭಕ್ತರು ಸೇರುವ ನಿರೀಕ್ಷೆಯಿದೆ. ಈ ನಿಟ್ಟಿನಲ್ಲಿ ರಾಜ್ಯ ಸರ್ಕಾರ ಎಲ್ಲ ರೀತಿಯ ಅಗತ್ಯ ಕ್ರಮಗಳನ್ನು ಕೈಗೊಂಡಿದೆ.

# ಲೈಂಗಿಕ ಕಿರುಕುಳ: ಉದ್ಯಮಿ ಬಾಬಿ ಚೆಮ್ಮನೂರ್ ಬಂಧನ

**ತಿರುವನಂತಪುರಂ:** ಮಲಯಾಳಂ ನಟಿ ಹನಿ ರೋಸ್ ಅವರಿಗೆ ಲೈಂಗಿಕ ಕಿರುಕುಳ ನೀಡಿದ ಆರೋಪ ಪ್ರಕರಣದ ತನಿಖೆ ನಡೆಸುತ್ತಿರುವ ವಿಶೇಷ ತನಿಖಾ ತಂಡ (ಎಸ್‌ಐಟಿ) ಉದ್ಯಮಿ ಬಾಬಿ ಚೆಮ್ಮನೂರ್ ಅವರನ್ನು ಬುಧವಾರ ಬಂಧಿಸಿದೆ.

ಚೆಮ್ಮನೂರ್ ಅವರನ್ನು ವಯನಾಡ್‌ನಲ್ಲಿ ಬಂಧಿಸಲಾಗಿದೆ ಎಂದು ಕೊಚ್ಚಿ ನಗರ ಪೊಲೀಸ್ ಅಧಿಕಾರಿಯೊಬ್ಬರು ದೃಢಪಡಿಸಿದ್ದಾರೆ.

ಚೆಮ್ಮನೂರು ನನ್ನ ವಿರುದ್ಧ ಪದೇ ಪದೇ ಅಶ್ಲೀಲ ಹೇಳಿಕೆಗಳನ್ನು ನೀಡುತ್ತಿದ್ದಾರೆ ಎಂದು ಹನಿ ರೋಸ್ ಕೊಚ್ಚಿ ಸೆಂಟ್ರಲ್ ಪೊಲೀಸರಿಗೆ ನೀಡಿದ ದೂರಿನಲ್ಲಿ ಉಲ್ಲೇಖಿಸಿದ್ದರು.

ಬಾಬಿ ಚೆಮ್ಮನೂರು ಬಂಧನದ ಕುರಿತು ಈಟಿವಿ ಭಾರತ್‌ಗೆ ಪ್ರತಿಕ್ರಿಯಿಸಿದ ನಟಿ, "ಇದು ನನಗೆ ನೆಮ್ಮದಿಯ ದಿನ. ಈ ವಿಷಯವನ್ನು ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರೊಂದಿಗೂ ಪ್ರಸ್ತಾಪಿಸಿದ್ದೇನೆ. ಆರೋಪಿಯ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವುದಾಗಿ ಅವರು ಭರವಸೆ ನೀಡಿದ್ದಾರೆ" ಎಂದು ಹೇಳಿದರು.

ಮಲಯಾಳಂ ಚಿತ್ರರಂಗದ ಪ್ರಮುಖ ನಟಿ: ಹನಿ ರೋಸ್ ವರ್ಗೀಸ್ ಅವರು ಮಲಯಾಳಂ ಚಲನಚಿತ್ರೋದ್ಯಮದ ಪ್ರಮುಖ ನಟಿ. ತಮಿಳು ಮತ್ತು ತೆಲುಗು ಚಿತ್ರಗಳಲ್ಲಿಯೂ ಅಭಿನಯಿಸಿದ್ದಾರೆ. ಇತ್ತೀಚೆಗೆ, 2023ರ ಆ್ಯಕ್ಷನ್-ಡ್ರಾಮಾ 'ವೀರ ಸಿಂಹ ರೆಡ್ಡಿ'ಯಲ್ಲಿ ನಂದಮೂರಿ ಬಾಲಕೃಷ್ಣ ಅವರೊಂದಿಗೆ ತೆರೆ ಹಂಚಿಕೊಂಡಿದ್ದರು.

ಭಾನುವಾರ, ಹನಿ ರೋಸ್ ಫೇಸ್‌ಬುಕ್ ಪೋಸ್ಟ್‌ನಲ್ಲಿ, ಒಬ್ಬ ವ್ಯಕ್ತಿ ಮಾಧ್ಯಮ ವೇದಿಕೆಗಳಲ್ಲಿ ನನ್ನನ್ನು ಹಿಂಬಾಲಿಸಿ ಲೈಂಗಿಕ ಕಿರುಕುಳ ನೀಡುತ್ತಿದ್ದಾನೆ ಎಂದು ತಿಳಿಸಿದ್ದರು. ಆ ವ್ಯಕ್ತಿಯ ಗುರುತು ಬಹಿರಂಗಪಡಿಸಿರಲಿಲ್ಲ. ಆದರೆ, ಅವರ ಪೋಸ್ಟ್‌ಗೆ ಅನೇಕ ಜನರು ಆಕ್ಷೇಪಾರ್ಹ ಕಾಮೆಂಟ್‌ಗಳನ್ನು ಮಾಡಿದಾಗ ವಿವಾದ ಹೆಚ್ಚಾಗತೊಡಗಿದೆ. ಬಳಿಕ ನಟಿ ಪೊಲೀಸರಿಗೆ ದೂರು ನೀಡಿದ್ದಾರೆ. ಕೊಚ್ಚಿ ಸೆಂಟ್ರಲ್ ಪೊಲೀಸರು 30 ಜನರ ವಿರುದ್ಧ ಪ್ರಕರಣ ದಾಖಲಿಸಿಕೊಂಡು ಒಬ್ಬ ವ್ಯಕ್ತಿಯನ್ನು ಬಂಧಿಸಿದ್ದರು.

ಮಂಗಳವಾರ ಹನಿ ರೋಸ್ ಸಾಮಾಜಿಕ ಮಾಧ್ಯಮ ಪೋಸ್ಟ್‌ನಲ್ಲಿ ಬಾಬಿ ಚೆಮ್ಮನೂರು ಅವರನ್ನು ಹೆಸರಿಸಿ, "ನೀವು (ಚೆಮ್ಮನೂರು) ಮಾಡಿದ ಅವಹೇಳನಕಾರಿ ಹೇಳಿಕೆಗಳ ವಿರುದ್ಧ ನಾನು ಎರ್ನಾಕುಲಂ ಕೇಂದ್ರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದೇನೆ. ನಿಮ್ಮಂತಹ ಆಲೋಚನೆವುಳ್ಳ ಅಂತಹ ಜನರ ವಿರುದ್ಧವೂ ನಾನು ಕ್ರಮ ಕೈಗೊಳ್ಳುತ್ತೇನೆ. ನಿಮಗೆ ನಿಮ್ಮ ಹಣದ ಮೇಲೆ ನಂಬಿಕೆ ಇರಬಹುದು. ಆದರೆ ನನಗೆ ಭಾರತೀಯ ನ್ಯಾಯಾಂಗ ವ್ಯವಸ್ಥೆಯಲ್ಲಿ ಸಂಪೂರ್ಣ ನಂಬಿಕೆ ಇದೆ" ಎಂದು ಹೇಳಿದ್ದರು.

"ನನ್ನ ದೂರು ಸರಿಯಾಗಿದೆ ಎಂದು ಪೊಲೀಸರಿಗೆ ಮನವರಿಕೆಯಾಯಿತು. ನಾನು ಎದುರಿಸಿದ ದೌರ್ಜನ್ಯದ ಬಗ್ಗೆ ಮಾತ್ರವಲ್ಲದೇ ಇಲ್ಲಿನ ನನ್ನ ಸಹೋದ್ಯೋಗಿಗಳೂ ಇದೇ ರೀತಿಯ ಸಮಸ್ಯೆಗಳನ್ನು ಎದುರಿಸುತ್ತಿರುವುದನ್ನು ತಿಳಿಸಿದ್ದೇನೆ. ಎಲ್ಲಾ ಹಂತಗಳಲ್ಲೂ ಮಹಿಳೆಯರು ಇದೇ ರೀತಿಯ ದೌರ್ಜನ್ಯ ಮತ್ತು ಶೋಷಣೆಗೆ ಒಳಗಾಗುತ್ತಿದ್ದಾರೆ. ಇದನ್ನು ನಾನೂ ಎದುರಿಸಿದ್ದೇನೆ. ನಾನು ಅವರೆಲ್ಲರ ಪರವಾಗಿ ಮುಂದೆ ಬಂದಿದ್ದೇನೆ" ಎಂದು ಹನಿ ರೋಸ್ ಹೇಳಿದ್ದಾರೆ.

ಅಷ್ಟೇ ಅಲ್ಲದೇ, ಬಾಬಿ ಚೆಮ್ಮನೂರು ಸಾಮಾಜಿಕ ಮಾಧ್ಯಮಗಳ ಮೂಲಕ ತನ್ನನ್ನೂ ಒಳಗೊಂಡಂತೆ ಅನೇಕ ಮಹಿಳೆಯರಿಗೆ ಕಿರುಕುಳ ಮತ್ತು ಲೈಂಗಿಕ ದೌರ್ಜನ್ಯ ಎಸಗುತ್ತಿದ್ದಾರೆ ಎಂದು ದೂರಿದ್ದಾರೆ.

ಚಲನಚಿತ್ರ ಸಂಸ್ಥೆ ಫೆಫ್ಕಾ ಕೂಡ ಹನಿ ರೋಸ್‌ಗೆ ಬೆಂಬಲ ಸೂಚಿಸಿದೆ. ಹನಿ ರೋಸ್ ಕೆಚ್ಚೆದೆಯ ಹೋರಾಟ ಪ್ರಾರಂಭಿಸಿದ್ದಾರೆ ಎಂದು ಈಇಈಏಂ ಹೇಳಿದೆ. ನಟಿಯ ಹೋರಾಟ ಲೈಂಗಿಕ ದೌರ್ಜನ್ಯದ ವಿರುದ್ಧ ಸಾಮೂಹಿಕ ಪ್ರತಿರೋಧದ ಆರಂಭ ಎಂದು ಫೇಸ್‌ಬುಕ್‌ನಲ್ಲಿ ಬರೆದಿದೆ.

ಆರೋಪಗಳನ್ನು ಅಲ್ಲಗಳೆದ ಬಾಬಿ ಚೆಮ್ಮನೂರು: ಚೆಮ್ಮನೂರು ಆಭರಣ ಬ್ರ್ಯಾಂಡ್‌ನ ಮಾಲೀಕ ಮತ್ತು ಲೈಫ್ ವಿಷನ್ ಚಾರಿಟೇಬಲ್ ಟ್ರಸ್ಟ್‌ನ ಸಂಸ್ಥಾಪಕ ಬಾಬಿ ಚೆಮ್ಮನೂರು ತಮ್ಮ ಮೇಲಿನ ಆರೋಪಗಳನ್ನು ನಿರಾಕರಿಸಿದ್ದಾರೆ. "ಅವರು ನನ್ನ ಎರಡು ಉದ್ಘಾಟನಾ ಸಮಾರಂಭಗಳಲ್ಲಿ ಭಾಗವಹಿಸಿದ್ದರು.

ನಾವು ಅಲ್ಲಿ ಡ್ಯಾನ್ಸ್ ಮಾಡಿದೆವು ಮತ್ತು ತಮಾಷೆಯ ವಿಷಯಗಳನ್ನು ಮಾತನಾಡಿದೆವು. ಆ ಸಮಯದಲ್ಲಿ ಅವರು ಯಾವುದಕ್ಕೂ ಆಕ್ಷೇಪ ವ್ಯಕ್ತಪಡಿಸಲಿಲ್ಲ. ಮತ್ತು ಈಗ ತಿಂಗಳುಗಳ ನಂತರ, ಅವರು ದೂರು ದಾಖಲಿಸಿದ್ದಾರೆ" ಎಂದು ಹೇಳಿದ್ದಾರೆ.

# 2024ರಲ್ಲಿ ಥೈಲ್ಯಾಂಡ್‌ಗೆ 35 ಮಿಲಿಯನ್ ಪ್ರವಾಸಿಗರ ಭೇಟಿ

**ಕೈವ್:** 2024 ರಲ್ಲಿ ಥೈಲ್ಯಾಂಡ್‌ಗೆ 35.54 ಮಿಲಿಯನ್ ವಿದೇಶಿ ಪ್ರವಾಸಿಗರು ಭೇಟಿ ನೀಡಿದ್ದಾರೆ. ಇದು ಹಿಂದಿನ ವರ್ಷಕ್ಕೆ ಹೋಲಿಸಿದರೆ ಶೇಕಡಾ 26.27 ರಷ್ಟು ಹೆಚ್ಚಳವಾಗಿದೆ ಎಂದು ಅಧಿಕೃತ ಅಂಕಿ ಅಂಶಗಳು ತಿಳಿಸಿವೆ.



ಕಳೆದ ವರ್ಷ ಚೀನಾದಿಂದ ಅತ್ಯಧಿಕ 6.73 ಮಿಲಿಯನ್ ಪ್ರವಾಸಿಗರು ಥೈಲ್ಯಾಂಡ್‌ಗೆ ಭೇಟಿ ನೀಡಿದ್ದಾರೆ. 4.95 ಮಿಲಿಯನ್ ಮತ್ತು 2.12 ಮಿಲಿಯನ್ ಪ್ರವಾಸಿಗರೊಂದಿಗೆ ಕ್ರಮವಾಗಿ ಮಲೇಷ್ಯಾ ಮತ್ತು ಭಾರತ ನಂತರದ ಸ್ಥಾನಗಳಲ್ಲಿವೆ ಎಂದು ಥಾಯ್ ಪ್ರವಾಸೋದ್ಯಮ ಮತ್ತು ಕ್ರೀಡಾ ಸಚಿವಾಲಯ ತಿಳಿಸಿದೆ.

ಥೈಲ್ಯಾಂಡ್ 2024 ರಲ್ಲಿ ಅಂತರರಾಷ್ಟ್ರೀಯ ಪ್ರವಾಸಿಗರಿಂದ ಸರಿಸುಮಾರು 1.67 ಟ್ರಿಲಿಯನ್ ಬಾಟ್ (ಸುಮಾರು 48.45 ಬಿಲಿಯನ್ ಡಾಲರ್) ಆದಾಯ ಗಳಿಸಿದೆ. ಇದು ಹಿಂದಿನ ವರ್ಷಕ್ಕೆ ಹೋಲಿಸಿದರೆ ಶೇಕಡಾ 34 ರಷ್ಟು ಹೆಚ್ಚಳವಾಗಿದೆ ಎಂದು ಸಚಿವಾಲಯ ತಿಳಿಸಿದೆ.

ಜನವರಿಯಿಂದ, ಥೈಲ್ಯಾಂಡ್‌ಗೆ ಭೇಟಿ ನೀಡುವ ಸಂದರ್ಶಕರು ವಿಶ್ವದಾದ್ಯಂತದ ಎಲ್ಲಾ ಥಾಯ್ ರಾಯಭಾರ ಕಚೇರಿಗಳು ಮತ್ತು ಕಾನ್ಸುಲೇಟ್‌ಗಳಲ್ಲಿ ಲಭ್ಯವಿರುವ ಆನ್ ಲೈನ್ ವ್ಯವಸ್ಥೆಯ ಮೂಲಕ ಎಲೆಕ್ಟ್ರಾನಿಕ್ ವೀಸಾಗೆ ಅರ್ಜಿ ಸಲ್ಲಿಸಬಹುದು. ಇದು ಸುವ್ಯವಸ್ಥಿತ ಅರ್ಜಿ ಪ್ರಕ್ರಿಯೆ ಮತ್ತು ಅನುಕೂಲಕರ ಆನ್ ಲೈನ್ ಪಾವತಿ ಆಯ್ಕೆಗಳನ್ನು ಖಚಿತಪಡಿಸುತ್ತದೆ.

ಪ್ರಸ್ತುತ, ಚೀನಾ, ಭಾರತ, ದಕ್ಷಿಣ ಕೊರಿಯಾ ಮತ್ತು ರಷ್ಯಾದಂತಹ ಪ್ರಮುಖ ವಲಯಗಳು ಸೇರಿದಂತೆ 93 ದೇಶಗಳು ಮತ್ತು ಪ್ರದೇಶಗಳ ಪ್ರವಾಸಿಗರು ವೀಸಾ ಇಲ್ಲದೆ 60 ದಿನಗಳವರೆಗೆ ಥೈಲ್ಯಾಂಡ್‌ನಲ್ಲಿ ಉಳಿಯಲು ಅವಕಾಶವಿದೆ. ಥೈಲ್ಯಾಂಡ್ ಪ್ರವಾಸೋದ್ಯಮ ಪ್ರಾಧಿಕಾರದ ಪ್ರಕಾರ, ಈ ವರ್ಷ 39 ಮಿಲಿಯನ್ ಅಂತರರಾಷ್ಟ್ರೀಯ ಪ್ರವಾಸಿಗರನ್ನು ಆಕರ್ಷಿಸುವ ಗುರಿಯನ್ನು ಹೊಂದಿದೆ.

ಕೊರೊನಾ ಸಾಂಕ್ರಾಮಿಕಕ್ಕೂ ಮೊದಲು 2019 ರಲ್ಲಿ ಥೈಲ್ಯಾಂಡ್‌ಗೆ ದಾಖಲೆಯ 39.9 ಮಿಲಿಯನ್ ವಿದೇಶಿ ಪ್ರವಾಸಿಗರು ಭೇಟಿ ನೀಡಿದ್ದರು. ಆ ವರ್ಷ ಪ್ರವಾಸೋದ್ಯಮದಿಂದ ಥೈಲ್ಯಾಂಡ್ 1.91 ಟ್ರಿಲಿಯನ್ ಬಾಟ್ ಆದಾಯ ಗಳಿಸಿತ್ತು. ದೇಶದ ಆರ್ಥಿಕ ಬೆಳವಣಿಗೆಯ ಪ್ರಮುಖ ಮೂಲವಾದ ಪ್ರವಾಸೋದ್ಯಮವು 2024 ರ ಎರಡನೇ ತ್ರೈಮಾಸಿಕದಲ್ಲಿ ಒಟ್ಟು ದೇಶೀಯ ಉತ್ಪನ್ನದ ಶೇಕಡಾ 14.16 ಮತ್ತು ಉದ್ಯೋಗದ ಶೇಕಡಾ 11.33 ರಷ್ಟನ್ನು ಹೊಂದಿದೆ.

# ಮಾರ್ಚ್‌ನಲ್ಲಿ ಸುನೀತಾ ವಿಲಿಯಮ್ಸ್ ಭೂಮಿಗೆ ವಾಪಸ್..!

**ವಾಷಿಂಗ್ಟನ್:** ಕಳೆದ ಹಲವಾರು ದಿನಗಳಿಂದ ಬಾಹ್ಯಾಕಾಶದಲ್ಲಿ ತಂಗಿರುವ ಭಾರತೀಯ ಮೂಲದ ಗಗನಯಾತ್ರಿ ಸುನೀತಾ ಮಿಲಿಯಮ್ಸ್ ಹಾಗೂ ಬುಚ್ ವಿಲೋರ್ ಅವರು ಮಾರ್ಚ್ ತಿಂಗಳಲ್ಲಿ ವಾಪಸ್ಸಾಗುವ ನಿರೀಕ್ಷೆ ಇದೆ. ಅಂತರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣದಲ್ಲಿ ತಿಂಗಳುಗಳ ಕಾಲ ಸಿಲುಕಿರುವ ಈ ಇಬ್ಬರು ಗಗನಯಾತ್ರಿಗಳು ತಮ್ಮ ಬಳಿ ಸಾಕಷ್ಟು ಆಹಾರವಿದೆ, ಲಾಂಡ್ರಿ ಬಿಕ್ಕಟ್ಟನ್ನು ಎದುರಿಸುತ್ತಿಲ್ಲ ನಾವು ಇಲ್ಲಿ ಅರಾಮಗಿದ್ದೇವೆ ಎಂದು ತಿಳಿಸಿದ್ದಾರೆ.



ಕಳೆದ ಜೂನ್‌ನಲ್ಲಿ ಬೋಯಿಂಗ್‌ನ ಸ್ಟಾರ್‌ಲೈನರ್ ಬಾಹ್ಯಾಕಾಶ ನೌಕೆಯಲ್ಲಿ ಬಾಹ್ಯಾಕಾಶ ನಿಲ್ದಾಣದಲ್ಲಿ ತಂಗಿರುವ ಅವರು ಕಕ್ಷೆಯ ಪ್ರಯೋಗಾಲಯದಲ್ಲಿ ಕೇವಲ ಎಂಟು ದಿನಗಳನ್ನು ಕಳೆಯಬೇಕಾಗಿತ್ತು.

ಆದರೆ ಸ್ಟಾರ್‌ಲೈನರ್‌ನ ಪೊಪಲ್ಷನ್ ಸಿಸ್ಟಮ್‌ನೊಂದಿಗಿನ ಸಮಸ್ಯೆಗಳಿಂದಾಗಿ ಅವರು ಇನ್ನು ಅಲ್ಲೆ ನೆಲೆಸಿದ್ದು, ಈಗ ಮಾರ್ಚ್ ಅಂತ್ಯದಲ್ಲಿ ಹಿಂದಿರುಗುವ ಬಾಹ್ಯಾಕಾಶ ನೌಕೆಯನ್ನು ಸಿದ್ದಪಡಿಸಲಾಗಿದೆ.

ವಿಲಿಯಮ್ಸ್ ಅವರು ಬಾಹ್ಯಾಕಾಶದಲ್ಲಿ ಅನಿರೀಕ್ಷಿತವಾಗಿ ದೀರ್ಘಕಾಲ ಉಳಿಯುವ ಹೊರತಾಗಿಯೂ ಉತ್ಸಾಹವು ಇನ್ನೂ ಹೆಚ್ಚಾಗಿರುತ್ತದೆ ಎಂದು ಹೇಳಿದರು. ಇಲ್ಲಿ ಕೆಲಸ ಮಾಡುತ್ತಿರುವುದು ಸಂತೋಷ ತಂದಿದೆ ಎಂದು ಅವರು ನಾಸಾ ಅಧಿಕಾರಿಗಳೊಂದಿಗಿನ ಕರೆಯಲ್ಲಿ ಹೇಳಿದರು.

ನಾವು ಎಸೆಯಲ್ಪಟ್ಟಿದ್ದೇವೆ ಎಂದು ಅನಿಸುವುದಿಲ್ಲ ಎಂದು ಅವರು ಹೇಳಿದರು. ಅಂತಿಮವಾಗಿ ನಾವು ಮನೆಗೆ ಹೋಗಲು ಬಯಸುತ್ತೇವೆ, ಏಕೆಂದರೆ ನಾವು ಸ್ವಲ್ಪ ಸಮಯದ ಹಿಂದೆ ನಮ್ಮ ಕುಟುಂಬಗಳನ್ನು ತೊರೆದಿದ್ದೇವೆ ಆದರೆ ನಾವು ಇಲ್ಲಿರುವಾಗ ನಮಗೆ ಬಹಳಷ್ಟು ಕೆಲಸಗಳಿವೆ ಎಂದಿದ್ದಾರೆ. ಆಹಾರ ಪೂರೈಕೆಯ ಬಗ್ಗೆ ಭರವಸೆ ನೀಡುತ್ತಿರುವಾಗ ವಿಲೋರ್ ನಕ್ಕರು. ನಾವು ಚೆನ್ನಾಗಿ ತಿನ್ನುತ್ತಿದ್ದೇವೆ ಎಂದು ಅವರು ಹೇಳಿದರು. ಲಾಂಡ್ರಿ ಅವಶ್ಯಕತೆಗಳು ಸಹ ಭೂಮಿಗೆ ಹೋಲಿಸಲಾಗುವುದಿಲ್ಲ ಎಂದು ಅವರು ವಿವರಿಸಿದರು.

ಬಟ್ಟೆಗಳು ಇಲ್ಲಿ ಸಡಿಲವಾಗಿ ಹೊಂದಿಕೊಳ್ಳುತ್ತವೆ, ನೀವು ಬೆವರು ಮತ್ತು ಅದು ಕೆಟ್ಟದಾಗುವುದು ಭೂಮಿಯ ಹಾಗೆ ಅಲ್ಲ. ಅಂದರೆ, ಅವು ಸಡಿಲವಾಗಿ ಹೊಂದಿಕೊಳ್ಳುತ್ತವೆ. ಆದ್ದರಿಂದ ನೀವು ಒಂದು ಸಮಯದಲ್ಲಿ ವಾರಗಟ್ಟಲೆ ಪ್ರಾಮಾಣಿಕವಾಗಿ ವಸ್ತುಗಳನ್ನು ಧರಿಸಬಹುದು ಮತ್ತು ಅದು ನಿಮಗೆ ತೊಂದರೆ ಕೊಡುವುದಿಲ್ಲ ಎಂದು ಅವರು ಹೇಳಿದರು.

# ಭಾರತದ ಚುನಾವಣಾ ಪ್ರಕ್ರಿಯೆ ಪಾರದರ್ಶಕವಾಗಿದೆ: ಓಂ ಬಿರ್ಲಾ

**ಲಂಡನ್:** ಭಾರತದ ಪ್ರಜಾಸತ್ತಾತ್ಮಕ ಮೌಲ್ಯಗಳು ಮತ್ತು ಇಲ್ಲಿನ ಬೆಳವಣಿಗೆಯಲ್ಲಿ ಬಲವಾದ ನಂಬಿಕೆ ಇದೆ ಎಂದು ಲೋಕಸಭಾ ಸ್ಪೀಕರ್ ಓಂ ಬಿರ್ಲಾ ಹೇಳಿದ್ದಾರೆ. ಲಂಡನ್‌ನಲ್ಲಿರುವ ಭಾರತದ ಹೈಕಮಿಷನ್‌ನಲ್ಲಿ ಸಮುದಾಯ ಸಭೆಯನ್ನುದ್ದೇಶಿಸಿ ಮಾತನಾಡಿದ ಅವರು, ಬಿರ್ಲಾ ಅವರು ತಮ್ಮ ಯುಕೆ ಸಹವರ್ತಿ ಹೌಸ್ ಆಫ್ ಕಾಮನ್ಸ್ ಸ್ಪೀಕರ್ ಸರ್ ಲಿಂಡ್ಸೆ ಹೊಯ್ಲ್ ಮತ್ತು ಸಂಸತ್ತಿನ ಇತರ ಸದಸ್ಯರೊಂದಿಗೆ ತಮ್ಮ ಸಂವಾದಗಳ ಒಳನೋಟಗಳನ್ನು ಹಂಚಿಕೊಂಡರು.

ಅವರ ಸಂವಾದಗಳು ಭಾರತ-ಯುಕೆ ಸಂಸದೀಯ ಸಹಕಾರದ ಬಲವನ್ನು ಮತ್ತು ಬಹು ವಲಯಗಳಲ್ಲಿ ದ್ವಿಪಕ್ಷೀಯ ಪಾಲುದಾರಿಕೆಯ ಬಹುಮುಖಿ ಸ್ವರೂಪವನ್ನು ಎತ್ತಿ ತೋರಿಸಿದೆ ಎಂದು ಅವರು ಹೇಳಿದರು.

ನಾನು ಪ್ರಮುಖ ಯುಕೆ ಸಂಸದರೊಂದಿಗೆ ಉತ್ತಮ ಸಂವಾದವನ್ನು ಹೊಂದಿದ್ದೇನೆ ಮತ್ತು ಅವರು ಭಾರತದ ಪ್ರಜಾಪ್ರಭುತ್ವ ಮೌಲ್ಯಗಳು ಮತ್ತು ಬೆಳವಣಿಗೆಯ ಕಥೆಯಲ್ಲಿ ಬಲವಾದ ನಂಬಿಕೆಯನ್ನು ಪ್ರದರ್ಶಿಸಿದರು ಎಂದು ಬಿರ್ಲಾ ಹೇಳಿದರು. ನಮ ಚುನಾವಣಾ ಪ್ರಕ್ರಿಯೆಯು ಪಾರದರ್ಶಕವಾಗಿದೆ, ಇದು ಪ್ರಪಂಚದಾದ್ಯಂತ ಪ್ರಜಾಪ್ರಭುತ್ವದಲ್ಲಿ ನಂಬಿಕೆಯನ್ನು ಬಲಪಡಿಸಲು ಸಹಾಯ ಮಾಡಿದೆ.

ಪ್ರಜಾಪ್ರಭುತ್ವದ ತಾಯಿ ಎಂದು ಕರೆಯಲ್ಪಡುವ ವಿಶ್ವದ ಅತಿದೊಡ್ಡ ಪ್ರಜಾಪ್ರಭುತ್ವ ಎಂದು ನಾವು ಹೆಮ್ಮೆಪಡುತ್ತೇವೆ ಮತ್ತು ನಾವು ನಮ ಸಂವಿಧಾನದ 75 ವರ್ಷಗಳನ್ನು ಆಚರಿಸುತ್ತಿರುವಾಗ ಭಾರತದ ಹೊಸ ಸಂಸತ್ತಿಗೆ ಬರಲು ನಾನು ಆಹ್ವಾನವನ್ನು ನೀಡುತ್ತೇನೆ ಎಂದು ಅವರು ಹೇಳಿದರು.

ನಮ್ಮ ದೇಶದ ಪ್ರಗತಿಯ ಪ್ರಮಾಣವು ಇತರ ಅನೇಕ ರಾಷ್ಟ್ರಗಳನ್ನು ಮೀರಿಸುತ್ತದೆ ಮತ್ತು ಮುಂಬರುವ ವರ್ಷಗಳಲ್ಲಿ, ಹೂಡಿಕೆಗಳನ್ನು ಆಕರ್ಷಿಸಲು ಭಾರತವು ತನ್ನ ಛಾಪು ಮೂಡಿಸುತ್ತದೆ. 21 ನೇ ಶತಮಾನದ ಮುಂಬರುವ ದಶಕಗಳು ಭಾರತಕ್ಕೆ ಸೇರಿವೆ ಎಂದು ಅವರು ಹೇಳಿದರು. ಬ್ರಿಟಿಷ್ ರಾಜಸ್ಥಾನಿ ಸಮುದಾಯದ ದೊಡ್ಡ ತುಕಡಿಯಿಂದ ಸ್ವಾಗತಿಸಲ್ಪಟ್ಟ ಕೋಟಾದ ಬಿಜೆಪಿ ಸಂಸದರು, ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರ್ಕಾರದ ವಿಕಸಿತ್ ಭಾರತ್ ಮಿಷನ್ ಅನ್ನು ಉತ್ತೇಜಿಸುವಲ್ಲಿ ಭಾರತೀಯ ಡಯಾಸ್ಪೊರಾ ಪ್ರಮುಖ ಪಾತ್ರವನ್ನು ಬಣ್ಣಿಸಿದರು.

# ಕೇಜ್ರಿ ನಿವಾಸ ಪ್ರವೇಶಕ್ಕೆ ಮುಂದಾದ ಆಪ್ ನಾಯಕರು

**ನವದೆಹಲಿ:** ಬಿಜೆಪಿಗರು ಶೀಶ್ ಮಹಲ್ ಗುರಿಯಾಗಿಸಿ ಟೀಕಿಸಿರುವ ಬೆನ್ನಲ್ಲೇ ಎಎಪಿ ನಾಯಕರಾದ ಸೌರಭ್ ಭಾರಧ್ವಾಜ್ ಮತ್ತು ಸಂಜಯ್ ಸಿಂಗ್ ಮಾಧ್ಯಮಗಳೊಂದಿಗೆ ಸಿಎಂ ನಿವಾಸ ತೋರಿಸಲು ಬಂಗಲೆ ಬಳಿಕ ಹೆಜ್ಜೆ ಹಾಕಲು ಪ್ರಯತ್ನಿಸಿದರು. ಈ ವೇಳೆ ಅವರನ್ನು ಬಂಗಲೆ ಎದುರು ದೆಹಲಿ ಪೊಲೀಸರು ತಡೆದು ನಿಲ್ಲಿಸಿದರು.

ಈ ಹಿಂದೆ ದೆಹಲಿ ಸಿಎಂ ಆಗಿದ್ದ ಕೇಜ್ರಿವಾಲ್ ಮನೆಗೆ ಐಷಾರಾಮಿ ವಸ್ತುಗಳನ್ನು ಉಪಯೋಗಿಸಿ, ಶೀಶ್ ಮಹಲ್ ಕಟ್ಟಿದ್ದಾರೆ ಎಂದು ಬಿಜೆಪಿ ಆರೋಪಿಸಿತ್ತು. ಇದಕ್ಕೆ ಪ್ರತಿಯಾಗಿ ಇಂದು ಎಎಪಿ ನಾಯಕರು ಮನೆಯ ನವೀಕರಣ ಹೇಗೆ ನಡೆದಿತ್ತು ಎಂಬುದನ್ನು ತೋರಿಸಲು ಮಾಧ್ಯಮಗಳೊಂದಿಗೆ ಅರವಿಂದ್ ಕೇಜ್ರಿವಾಲ್ ವಾಸವಾಗಿದ್ದ ಫ್ಲಾಗ್‌ಸ್ಟಾಫ್ ರಸ್ತೆಯಲ್ಲಿನ ಬಂಗಲೆ ಪ್ರವೇಶಕ್ಕೆ ಮುಂದಾದರು. ಆದರೆ, ಈ ವೇಳೆ ಅವರನ್ನು ತಡೆಯಲಾಗಿದೆ.

ಈ ಸಂದರ್ಭದಲ್ಲಿ ಮಾತನಾಡಿದ ಭಾರಧ್ವಾಜ್, ಮುಖ್ಯಮಂತ್ರಿಗಳ ನಿವಾಸ ಪ್ರವೇಶಿಸಲು ನಮಗೆ ಯಾಕೆ ಅನುಮತಿ ಬೇಕು ಯಾರು ನಮ್ಮನ್ನು ತಡೆಯಲು ನಿಮಗೆ ಸೂಚನೆ ನೀಡಿದವರು ನಾನು ಸಚಿವನಾಗಿದ್ದು, ನಾನು ಇಲ್ಲಿ ತಪಾಸಣೆಗೆ ಆಗಮಿಸಿದ್ದೇನೆ. ನೀವು ಹೇಗೆ ನನ್ನನ್ನು ತಡೆಯುತ್ತೀರಾ ನಿಮಗೆ ಏನಾದರೂ ಲೆಫ್ಟಿನೆಂಟ್ ಗವರ್ನರ್ ಅವರಿಂದ ನಿರ್ದೇಶನ ಬಂದಿದ್ಯಾ ನನ್ನ ಮೇಲಿರುವ ಏಕೈಕ ವ್ಯಕ್ತಿ ಅವರೇ ಎಂದು ಪೊಲೀಸ್ ಸಿಬ್ಬಂದಿಗಳೊಂದಿಗೆ ವಾಗ್ವಾಳಿ ನಡೆಸಿದರು.

ಬಿಜೆಪಿ ಆರೋಪಿಸಿರುವಂತೆ ಅರವಿಂದ್ ಕೇಜ್ರಿವಾಲ್ ಅವರು ವಾಸವಿದ್ದ ಅಧಿಕೃತ ನಿವಾಸ 6, ಫ್ಲಾಗ್‌ಸ್ಟಾಫ್ ರಸ್ತೆಗೆ ಕರೆದುಕೊಂಡು ಹೋಗಿ, ಅಲ್ಲಿರುವ ಬಂಗಾರದ ಕಮೋಡ್, ಈಜುಕೊಳ, ಮಿನಿ ಬಾರ್ ಪ್ರದರ್ಶಿಸುತ್ತೇನೆ. ನೀವು ಎಲ್ಲರೂ ಬುಧವಾರ ಬೆಳಗ್ಗೆ ಬಂಗಲೆ ಬಳಿ ಬನ್ನಿ ಎಂದು ಭಾರದ್ವಾಜ್ ಅವರು ಮಾಧ್ಯಮಗಳಿಗೆ ಆಹ್ವಾನಿಸಿದ್ದರು.

ಇದೇ ವೇಳೆ ಟೀಕಾಪ್ರಹಾರ ನಡೆಸಿದ ಅವರು, ಬಿಜೆಪಿ ಪ್ರತಿದಿನ ಒಂದು ಹೊಸ ವಿಡಿಯೋ ಮತ್ತು ಫೋಟೋವನ್ನು ಹಂಚಿಕೊಳ್ಳುವ ಮೂಲಕ ಸಿಎಂ ನಿವಾಸದ ನವೀಕರಣಕ್ಕೆ ಕೋಟ್ಯಂತರ ರೂ. ವ್ಯಯ ಮಾಡುತ್ತಿದೆ ಎಂದು ಆರೋಪಿಸುತ್ತಿದೆ. ಇಂದು ಇದೀಗ ಮಾಧ್ಯಮ ಸಿಬ್ಬಂದಿಯೊಂದಿಗೆ ನಾವು ಇಲ್ಲಿಗೆ ಬಂದಾಗ ಬಿಜೆಪಿ ಓಡಿ ಹೋಗುತ್ತಿದ್ದು, ಮೂರು ಹಂತದ ಬ್ಯಾರಿಕೇಡ್ ಅನ್ನು ನಿರ್ಮಾಣ ಮಾಡಿ ಮಾಧ್ಯಮದವರನ್ನು ತಡೆಯುವ ಯತ್ನ ನಡೆಸಲಾಗಿದೆ, ವಾಟರ್ ಕ್ಯಾನೊನ್ಸ್ ಹಾಗೂ ಹೆಚ್ಚುವರಿ ಡಿಸಿಪಿಯನ್ನು ನಿಯೋಜಿಸಲಾಗಿದೆ. ಬಿಜೆಪಿ ಆರೋಪಿಸಿದಂತೆ ಸಿಎಂ ಮನೆಯನ್ನು ನೋಡೋಣ ಎಂದು ಸವಾಲು ಹಾಕಿದರು.

6, ಫ್ಲಾಗ್‌ಸ್ಟಾಫ್ ರಸ್ತೆ ಬಂಗಲೆ ವಿರುದ್ಧ ಬಿಜೆಪಿ ಟೀಕಿಸಿರುವುದಕ್ಕೆ ಪ್ರತಿಯಾಗಿ ಎಎಪಿ ನಾಯಕರು ಪ್ರಧಾನಿ ನಿವಾಸವನ್ನು 'ರಾಜ ಮಹಲ್' ಎಂದು ಕರೆದಿದ್ದು, ಐಷಾರಾಮಿ ಜೀವನ ಶೈಲಿಯೊಂದಗೆ 2,700 ಕೋಟಿ ವೆಚ್ಚದಲ್ಲಿ ನಿರ್ಮಾಣ ಮಾಡಲಾಗಿದೆ ಎಂದು ಆರೋಪಿಸಿದರು.

# ಜನ ಗಣ ಮನ ಅಲ್ಲ, ವಂದೇ ಮಾತರಂ ರಾಷ್ಟ್ರಗೀತೆಯಾಗಲಿ

**ಮಹಾರಾಷ್ಟ್ರ:** 'ಜನ ಗಣ ಮನ' ಬದಲಿಗೆ 'ವಂದೇ ಮಾತರಂ' ಭಾರತದ ರಾಷ್ಟ್ರಗೀತೆಯಾಗಬೇಕು. ಇದಕ್ಕಾಗಿ ದೇಶದಲ್ಲಿ ಹೋರಾಟ ಸಂಘಟಿಸಬೇಕಿದೆ ಎಂದು ಧಾರ್ಮಿಕ ಮುಖಂಡ ರಾಮಗಿರಿ ಮಹಾರಾಜ್ ಹೇಳಿದ್ದಾರೆ.

'ಮಿಷನ್ ಅಯೋಧ್ಯೆ' ಸಿನಿಮಾದ ಟ್ರೇಲರ್ ಬಿಡುಗಡೆಗೆ ಮಹಾರಾಷ್ಟ್ರಕ್ಕೆ ಬಂದ ಅವರು ಮಾಧ್ಯಮಗಳೊಂದಿಗೆ ಮಾತನಾಡಿ, ಬಂಕಿಮ್‌ಚಂದ್ರ ಚಟರ್ಜಿ ಅವರು ರಚಿಸಿರುವ ವಂದೇ ಮಾತರಂ ನಮ್ಮ ರಾಷ್ಟ್ರಗೀತೆಯಾಗಬೇಕು ಎಂಬುದು ನಮ್ಮ ನಿಲುವು. ಇದಕ್ಕಾಗಿ ದೊಡ್ಡ ಮಟ್ಟದಲ್ಲಿ ಹೋರಾಟ ನಡೆಸುವ ಕಾಲ ಬಂದಿದೆ ಎಂದರು.

ಸದ್ಯ ರಾಷ್ಟ್ರಗೀತೆಯಾಗಿರುವ, ರವೀಂದ್ರನಾಥ ಟ್ಯಾಗೋರ್ ಅವರು ಬರೆದಿರುವ 'ಜನ ಗಣ ಮನ' ಹಾಡನ್ನು 1911 ರಲ್ಲಿ ಅವರು ಕೋಲ್ಕತ್ತಾದಲ್ಲಿ ಹಾಡಿದ್ದರು. ಅಂದು ರಾಷ್ಟ್ರವು ಸ್ವತಂತ್ರವಾಗಿರಲಿಲ್ಲ. ದೇಶವನ್ನು ಒಕ್ಕಲೆಬ್ಬಿಸಿದ್ದ ಬ್ರಿಟಿಷ್ ರಾಜ ಐದನೇ ಜಾರ್ಜ್ ಮುಂದೆ ಅನ್ಯಾಯದ ವಿರುದ್ಧ ಈ ಹಾಡನ್ನು ಹಾಡಲಾಗಿತ್ತು. ದೇಶವನ್ನು ಪ್ರತಿನಿಧಿಸುವ ಗೀತೆ ಇದಾಗಿರಲಿಲ್ಲ ಎಂದು ರಾಮಗಿರಿ ಮಹಾರಾಜರು ಪ್ರತಿಪಾದಿಸಿದರು.

ವಿವಾದಾತ್ಮಕ ಹೇಳಿಕೆಗಳ ಬಗ್ಗೆ ಪತ್ರಕರ್ತರ ಪ್ರಶ್ನೆಗೆ ಉತ್ತರಿಸಿದ ಅವರು, ಇದು ಗೌರವ ಅಥವಾ ಅಗೌರವದ ಪ್ರಶ್ನೆಯಲ್ಲ. ಸತ್ಯವನ್ನು ಹೇಳುವ ರೀತಿಯಾಗಿದೆ. ಸತ್ಯ ಹೇಳಿದ್ದೇ ಅಗೌರವ ಎಂದಾದರೆ, ಅದಕ್ಕಿಂತ ದುರದೃಷ್ಟಕರ ಸಂಗತಿ ಇನ್ನೊಂದಿಲ್ಲ ಎಂದು ಅವರು ಹೇಳಿದರು.

ರವೀಂದ್ರನಾಥ ಠಾಗೋರ್ ಅವರು ಮೂಲತಃ ಬಂಗಾಳಿಯಲ್ಲಿ ರಚಿಸಲಾದ 'ಜನ ಗಣ ಮನ' ಗೀತೆಯನ್ನು ಹಿಂದಿ ಭಾಷೆಯಲ್ಲಿ ರೂಪಿಸಿ, 1950ರ ಜನವರಿ 24 ರಂದು ಸಂವಿಧಾನ ಸಮಿತಿಯು ರಾಷ್ಟ್ರಗೀತೆಯನ್ನಾಗಿ ಅಳವಡಿಸಿಕೊಳ್ಳಲು ಒಪ್ಪಿಗೆ ನೀಡಿತ್ತು. ಅಂದಿನಿಂದ ನಾವು ಇದೇ ಹಾಡನ್ನೇ ರಾಷ್ಟ್ರಗೀತೆಯಾಗಿ ಬಳಸುತ್ತಿದ್ದೇವೆ.

ಎನ್‌ಸಿಪಿ ತೀವ್ರ ಆಕ್ಷೇಪ: ರಾಮಗಿರಿ ಮಹಾರಾಜ್‌ರ ಈ ಹೇಳಿಕೆಗೆ ಶರದ್ ಪವಾರ್ ಅವರ ಬಣದ ಎನ್‌ಸಿಪಿ ಶಾಸಕ ಜಿತೇಂಧ್ರ ಅವ್ಹಾದ್ ಅವರು ಕಟುವಾಗಿ ಟೀಕಿಸಿದ್ದಾರೆ. ರಾಷ್ಟ್ರಗೀತೆಯನ್ನು ಬದಲಿಸುವ ಕಾಲ ಬಂದಿದೆ ಎಂದು ಹೇಳಿರುವ ರಾಮಗಿರಿ ಮಹಾರಾಜರಿಗೆ ತಕ್ಕಶಾಸ್ತಿ ಮಾಡುವ ಸಮಯ ಬಂದಿದೆ. ಈಗ ಅವರು 'ಜನ ಗಣ ಮನ'ಕ್ಕೆ ಆಕ್ಷೇಪ ವ್ಯಕ್ತಪಡಿಸಿದ್ದಾರೆ. ಮುಂದೊಂದು ದಿನ ಅವರು ಗೀತೆಯನ್ನೇ ನಿಷೇಧಿಸಿ ಎಂದರೂ ಅಚ್ಚರಿಯಿಲ್ಲ. ಇದು ಮಹಾರಾಜರ ಅತಿರೇಕದ ವರ್ತನೆ ಎಂದು ಕಿಡಿಕಾರಿದ್ದಾರೆ.

# 2 ತಿಂಗಳು ರಜೆ ಹಾಕಿದ್ದೀನಿ







ಕನ್ನಡ ಚಿತ್ರರಂಗದ ಅದ್ಭುತ ನಟ ವಸಿಷ್ಠ ಸಿಂಹ ಹಾಗೂ ನಟಿ ಹರಿಪ್ರಿಯಾ ಚೊಚ್ಚಲ ಮಗುವಿನ ನಿರೀಕ್ಷೆಯಲ್ಲಿದ್ದಾರೆ. ಕೆಲವು ದಿನಗಳ ಹಿಂದೆ ಬಹಳ ಬೋಲ್ಡ್ ಫೋಟೋಶೂಟ್ ಮಾಡಿಸಿದ್ದಾರೆ.ಅಲ್ಲದೆ ಇಡೀ ಚಂದನವನದ ತಾರೆಯರನ್ನು ಕರೆದು ಅದ್ದೂರಿಯಾಗಿ ಸೀಮಂತ ಕಾರ್ಯಕ್ರಮ ಹಮ್ಮಿಕೊಂಡಿದ್ದರು.

ಹಸಿರು ಬಣ್ಣದ ಮೈಸೂರ್ ಸಿಲ್ಕ್ ಸೀರೆಯಲ್ಲಿ ಹರಿಪ್ರಿಯಾ ಕಂಗೊಳಿಸಿದ್ದಾರೆ. ಹೆಣ್ಣು ಮಗುನಾ ಗಂಡು ಮಗುನಾ ಎಂದು ನೆಟ್ಟಿಗರು ಗೆಸ್ ಮಾಡಲು ಶುರು ಮಾಡಿದ್ದಾರೆ. ಈ ಸಮಯದಲ್ಲಿ ವಸಿಷ್ಠ ಸಿಂಹ ಪೆಟರ್ನಿಟಿ ಲೀವ್ ತೆಗೆದುಕೊಳ್ಳಲು ಮುಂದಾಗಿದ್ದಾರೆ.

'ನಾನು ಎರಡು ತಿಂಗಳುಗಳ ಕಾಲ ಪೆಟರ್ನಿಟಿ ಬ್ರೇಕ್ ತೆಗೆದುಕೊಳ್ಳಬೇಕು ಎಂದು ನಿರ್ಧರಿಸಿರುವೆ' ಎಂದು ಹೆಮ್ಮೆಯಿಂದ ಖುಷಿಯಿಂದ ವಸಿಷ್ಠ ಸಿಂಹ ಹೇಳಿದ್ದಾರೆ. ಮಾಲ್ಡೀವ್ಸ್ ಟ್ರಿಪ್‌ನಲ್ಲಿ ಸೆರೆ ಹಿಡಿದಿರುವ ಫೋಟೋಗಳನ್ನು ಅಪ್ಲೋಡ್ ಮಾಡುವ ಮೂಲಕ ತಾಯಿ ಆಗುತ್ತಿರುವ ವಿಚಾರವನ್ನು ರಿವೀಲ್ ಮಾಡಿದ್ದರು.


'ಸಮಯ ಬಲು ಬೇಗ ಸಾಗುತ್ತಿದೆ. ಅದೆಷ್ಟೋ ಅಮೂಲ್ಯವಾದ ಕ್ಷಣಗಳನ್ನು ನಾನು ಮಿಸ್ ಮಾಡಿಕೊಂಡಿರುವೆ. ಮಾನಸಿಕವಾಗಿ ಹಾಗೂ ದೈಹಿಕವಾಗಿ ಹರಿಪ್ರಿಯಾ ಸಾಕಷ್ಟು ಬದಲಾವಣೆಗಳನ್ನು ಎದುರಿಸುತ್ತಿದ್ದಳು. ಈ ಸಮಯದಲ್ಲಿ ಆಕೆ ಪರ ನಿಂತುಕೊಂಡು ನಾನು ಸಪೋರ್ಟ್ ಮಾಡಲು ಆಗಲಿಲ್ಲ ಏಕೆಂದರೆ ನನ್ನ ಕೆಲಸ ಕಮಿಟ್ಮೆಂಟ್ ಹೆಚ್ಚಿತ್ತು. ಎರಡನೇ ಟ್ರೈಮಿಸ್ಟರ್ ಸಮಯದಿಂದ ನಾನು ಹರಿಪ್ರಿಯಾ ಜೊತೆ ಹೆಚ್ಚಿಗೆ ಸಮಯ ಕಳೆದಿರುವೆ. ನನಗೆ ಖುಷಿ ಇದೆ ಸಮಯ ಕೊಟ್ಟಿರುವೆ ಎಂದು. ಮೊದಲ ಸ್ಕ್ಯಾನ್‌ನಿಂದ ಹಿಡಿದು ಮೊದಲ ಬೇಬಿ ಕಿಕ್‌ವರೆಗೂ ನಾನು ಪ್ರತಿಯೊಂದನ್ನು ತುಂಬಾ ಖುಷಿಯಿಂದ ಎಂಜಾಯ್ ಮಾಡಿದ್ದೀನಿ' ಎಂದು ಟೈಮ್ಸ್ ಆಫ್ ಇಂಡಿಯಾ ಸಂದರ್ಶನದಲ್ಲಿ ವಸಿಷ್ಠ ಸಿಂಹ ಮಾತನಾಡಿದ್ದಾರೆ.

'ಪಾರ್ಟನರ್ ಅಗಿ ಹರಿಪ್ರಿಯಾ ಪ್ರೆಗ್ನೆಂಟ್ ಆಗಿ ಎದುರಿಸುವ ಮೂಡ್ ಸ್ವಿಂಗ್, ನೋವು ಮತ್ತು ರಾತ್ರಿ ನಿದ್ರೆ ಇಲ್ಲದ ಸಮಯದಲ್ಲಿ ನಾನು ಆಕೆ ಪರವಾಗಿ ನಿಂತಿದ್ದೆ. ಗರ್ಭಿಣಿ ಆದಾಗ ಹೆಣ್ಣು ಮಕ್ಕಳು ಎದುರಿಸುವ ಬದಲಾವಣೆಗಳ ಬಗ್ಗೆ ಈಗ ಬಹಳ ಹತ್ತಿರದಿಂದ ನೋಡಿದ್ದೀನಿ. ಪ್ರತಿಯೊಬ್ಬ ಹೆಣ್ಣಿಗೂ ಹ್ಯಾಟ್ಸ್ ಆಫ್ ಹೇಳಬೇಕು.

ಹೀಗಾಗಿ ನಾನು ಬ್ರೇಕ್ ತೆಗೆದುಕೊಳ್ಳಬೇಕು ಎಂದು ನಿರ್ಧಾರ ಮಾಡಿದ್ದೀನಿ. ಪ್ರತಿಯೊಬ್ಬ ಗಂಡಸು ಬ್ರೇಕ್ ತೆಗೆದುಕೊಂಡು ತಾಯಿ ಮತ್ತು ಮಗುವಿನ ಜೊತೆ ಸಮಯ ಕಳೆಯಬೇಕು. ನನ್ನ ತಾಯಿ ಅನಾರೋಗ್ಯದ ಸಮಯದಲ್ಲಿ ನನ್ನ ತಂದೆ ಎಷ್ಟು ಕಾಳಜಿ ವಹಿಸಿ ನೋಡಿಕೊಂಡರು ಎಂದು ನಾನು ಕಣ್ಣಾರೆ ನೋಡಿದ್ದೀನಿ.

ಫ್ಯಾಮಿಲಿಯನ್ನು ನೋಡಿಕೊಳ್ಳುವುದು ಸುಂದರ ಸಮಯ' ಎಂದು ವಸಿಷ್ಠ ಸಿಂಹ ಹೇಳಿದ್ದಾರೆ.

**'ಪಾರ್ಟನರ್ ಅಗಿ ಹರಿಪ್ರಿಯಾ ಪ್ರೆಗ್ನೆಂಟ್ ಆಗಿ ಎದುರಿಸುವ ಮೂಡ್ ಸ್ವಿಂಗ್, ನೋವು ಮತ್ತು ರಾತ್ರಿ ನಿದ್ರೆ ಇಲ್ಲದ ಸಮಯದಲ್ಲಿ ನಾನು ಆಕೆ ಪರವಾಗಿ ನಿಂತಿದ್ದೆ. ಗರ್ಭಿಣಿ ಆದಾಗ ಹೆಣ್ಣು ಮಕ್ಕಳು ಎದುರಿಸುವ ಬದಲಾವಣೆಗಳ ಬಗ್ಗೆ ಈಗ ಬಹಳ ಹತ್ತಿರದಿಂದ ನೋಡಿದ್ದೀನಿ. ಪ್ರತಿಯೊಬ್ಬ ಹೆಣ್ಣಿಗೂ ಹ್ಯಾಟ್ಸ್ ಆಫ್**



## ಸಾಂಪ್ರದಾಯಿಕ ಉಡುಗೆಯಲ್ಲಿ ಫೋಟೋ ಶೂಟ್

ತಮಿಳು ಚಿತ್ರರಂಗದಲ್ಲಿ ಮುಂಚೂಣಿಯ ನಟಿಯಾಗಿದ್ದರೂ, ವಿವಾದಗಳಿಂದಲೂ ಸುದ್ದಿಯಲ್ಲಿದ್ದವರು ಅಮಲಾ ಪೌಲ್. ಸಿಂಧು ಸಮವೇಲಿ ಚಿತ್ರವು ಅವರ ವಿರುದ್ಧ ಹಲವು ಟೀಕೆಗಳನ್ನು ತಂದಿತು. ಕನ್ನಡ, ಮಲಯಾಳಂ ಚಿತ್ರಗಳಲ್ಲೂ ಇವರು ನಟಿಸಿದ್ದಾರೆ. ಮಲಯಾಳಂ ಮೂಲದ ನಟಿ ಅಮಲಾ ಪೌಲ್ ಅವರು ಹೆಚ್ಚಾಗಿ ತಮಿಳು ಹಾಗೂ ತೆಲುಗು ಸಿನಿಮಾಗಳಲ್ಲಿ ನಟಿಸಿದ್ದಾರೆ.

ನಂತರ ಪ್ರಭು ಸಾಲಮನ್ ನಿರ್ದೇಶನದ 'ಮೈನಾ' ಚಿತ್ರದಲ್ಲಿ ವಿಧಾರ್ಥ್ ಜೊತೆ ನಟಿಸಿದ ಅಮಲಾ ಪಾಲ್, ತಮ್ಮ ಮೇಲಿನ ನಕಾರಾತ್ಮಕ ಟೀಕೆಗಳನ್ನು ಬದಲಾಯಿಸಿದರು. ವಿಜಯ್ ಜೊತೆ ನಟಿಸುವಷ್ಟು ಬೆಳೆದ ಅವರು, 2014 ರಲ್ಲಿ ನಿರ್ದೇಶಕ ಎ.ಎಲ್. ವಿಜಯ್ ಅವರನ್ನು ವಿವಾಹವಾದರು. ಆದರೆ ಮೂರು ವರ್ಷಗಳಲ್ಲೇ ವಿಚ್ಛೇದನ ಪಡೆದರು. ವಿಚ್ಛೇದನದ ನಂತರ ಅಮಲಾ ಪೌಲ್ ಅವರ ವೃತ್ತಿಜೀವನದಲ್ಲಿ ಹಿನ್ನಡೆಯಾಯಿತು. 'ಆಡೈ ಚಿತ್ರವು ವಿಮರ್ಶಾತ್ಮಕವಾಗಿ ಮೆಚ್ಚುಗೆ ಪಡೆದರೂ, ಗಳಿಕೆಯಲ್ಲಿ ವಿಫಲವಾಯಿತು. ಚಿತ್ರದಲ್ಲಿನ ಕೆಲವು ದೃಶ್ಯಗಳು ಅವರಿಗೆ ಹಿನ್ನಡೆಯನ್ನುಂಟು ಮಾಡಿದವು. ಇದರಿಂದಾಗಿ ಅಮಲಾ ಪಾಲ್ ಮಾನಸಿಕ ಒತ್ತಡಕ್ಕೆ ಒಳಗಾಗಿದ್ದರು ಎಂದು ಹೇಳಲಾಗುತ್ತದೆ. 2023 ರಲ್ಲಿ, ಜಗತ್ ದೇಸಾಯಿ ಅವರನ್ನು ವಿವಾಹವಾದರು. ಅವರಿಗೆ ಒಬ್ಬ ಗಂಡು ಮಗುವಿದೆ.

ಈಗ ತಮ್ಮ ಮಗುವಿನೊಂದಿಗೆ ತೆಗೆಸಿಕೊಂಡ ಫೋಟೋ ವೈರಲ್ ಆಗಿದೆ. ನನ್ನ ಗಂಡನನ್ನು ಭೇಟಿಯಾದ ಒಂದು ತಿಂಗಳಲ್ಲೇ ನಾನು ಗರ್ಭಿಣಿಯಾದೆ. ಅಷ್ಟು ಆತುರ ಅವರಲ್ಲಿತ್ತು ಎಂದು ಈ ಹಿಂದೆ ಅವರು ಹೇಳಿಕೆ ನೀಡಿದ್ದರು. ಗರ್ಭಿಣಿಯಾದ ಬಳಿಕ ಇವರ ಮದುವೆಯಾಗಿತ್ತು. ಕನ್ನಡದ ಹೆಬ್ಬುಲಿ ಚಿತ್ರ ಖ್ಯಾತಿಯ ನಟಿ ಅಮಲಾ ಪೌಲ್ ಮಗ ಇಲೈ ಜೊತೆಗಿನ ಸುಂದರ ಫೋಟೋಗಳನ್ನು ಹಂಚಿಕೊಂಡಿದ್ದು, ಮಗನಿಗೆ ಹೊಸ ಬಟ್ಟೆ ತೊಡಿಸಿದ್ದಾರೆ. ಮದುವೆಯ ನಂತರ ಕೌಟುಂಬಿಕ ಜೀವನವನ್ನು ಎಂಜಾಯ್ ಮಾಡುತ್ತಿರುವ ಅಮಲಾ ಪೌಲ್ ಕೆಲವು ಚಿತ್ರಗಳಲ್ಲಿ ನಟಿಸುತ್ತಿದ್ದಾರೆ. ಪ್ರಸ್ತುತ, ಅವರು ತಮ್ಮ ಮಗನೊಂದಿಗೆ ಸಾಂಪ್ರದಾಯಿಕ ಉಡುಗೆಯಲ್ಲಿರುವ ಚಿತ್ರಗಳನ್ನು ಪೋಸ್ಟ್ ಮಾಡುವ ಮೂಲಕ ತಮ್ಮ ಅಭಿಮಾನಿಗಳ ಗಮನ ಸೆಳೆದಿದ್ದಾರೆ.



# ಬೆತ್ತಲಾಗಿ ಸಂಕಷ್ಟಕ್ಕೆ ಸಿಲುಕಿದ ಡಿಮ್ರಿ

ಸಂದೀಪ್ ರೆಡ್ಡಿ ವಂಗಾ ಅನಿಮಲ್ ಚಿತ್ರದಲ್ಲಿ ನಟ ರಣಬೀರ್ ಕಪೂರ್ ಜೊತೆ ಸಂಪೂರ್ಣ ಬೆತ್ತಲಾಗುವ ಮೂಲಕ ಭಾರಿ ಸಂಚಲನ ಸೃಷ್ಟಿಸಿರುವ ನಟಿ ತೃಪ್ತಿ ಡಿಮ್ರಿ. ಕಳೆದ ವರ್ಷದವರೆಗೂ ತೃಪ್ತಿ ಡಿಮ್ರಿ ಎನ್ನುವ ಬಾಲಿವುಡ್ ನಟಿ ಇದ್ದಾರೆ ಎನ್ನುವುದೇ ಎಷ್ಟೋ ಮಂದಿಗೆ ತಿಳಿದಿರಲಿಲ್ಲ.

ಯಾವಾಗ ಚಿತ್ರದಲ್ಲಿ ಬೆತ್ತಲಾಗಿ ನಟಿಸಿದ್ರೋ ಆಗ ಈಕೆಯ ಹುಡುಕಾಟ ಗೂಗಲ್‌ನಲ್ಲಿ ಜೋರಾಯಿತು. ಪಾಳುಬಿದ್ದಿದ್ದ ಈಕೆಯ ಸೋಷಿಯಲ್ ಮೀಡಿಯಾ ಖಾತೆ ಸಕ್ರಿಯಗೊಂಡಿತ್ತು.

ದಿಢೀರನೆ ಎಲ್ಲರ ಕಣ್ಣು ಕುಕ್ಕಿದ್ದರು ಈ ಬೆಡಗಿ. ಅನಿಮಲ್ ಚಿತ್ರದಲ್ಲಿ ನಟ ರಣಬೀರ್ ಕಪೂರ್ ಜೊತೆ ಈಕೆಯ ನಗ್ನ ದೃಶ್ಯಗಳನ್ನು ನೋಡುತ್ತಿದ್ದಂತೆಯೇ ದಿಢೀರನೆ ಫ್ಯಾನ್ಸ್ ಸಂಖ್ಯೆಯನ್ನೂ ಏರಿಸಿಕೊಂಡರು. ರಾತ್ರೋರಾತ್ರಿ ನ್ಯಾಷನಲ್ ಕ್ರಷ್ ಕೂಡ ಆದರು. ಅನಿಮಲ್ ಚಿತ್ರದಲ್ಲಿ ಆಲಿಯಾ ಭಟ್ ಪತಿ ರಣಬೀರ್ ಕಪೂರ್ ಜೊತೆ ಬೆತ್ತಲಾದ ಬಳಿಕ ಬ್ಯಾಡ್ ನ್ಯೂಸ್ ಚಿತ್ರದಲ್ಲಿ ಕತ್ರೀನಾ ಕೈಫ್ ಪತಿ ವಿಕ್ಕಿ ಕೌಶಲ್ ಜೊತೆ ಹಸಿಬಿಸಿ ದೃಶ್ಯದಲ್ಲಿ ಕಾಣಿಸಿಕೊಂಡವರು ತೃಪ್ತಿ ಡಿಮ್ರಿ.


ಆದರೆ ಇದೀಗ ಇದೇ ಹಸಿಬಿಸಿ ದೃಶ್ಯ ತೃಪ್ತಿಯನ್ನು ಸಂಕಷ್ಟದಲ್ಲಿ ಸಿಲುಕಿಸಿರುವುದಾಗಿ ವರದಿಯಾಗಿದೆ. ತೃಪ್ತಿ ಡಿಮ್ರಿಯನ್ನು ಆಶಿಕಿ-3 ಚಿತ್ರದಿಂದ ತೆಗೆದುಹಾಕಲಾಗಿದೆ ಎನ್ನಲಾಗಿದೆ. ಈ ಚಿತ್ರಕ್ಕೆ ನಟಿ ಸಹಿ ಹಾಕಿದ್ದರು. ಆದರೆ ವರದಿಗಳ ಪ್ರಕಾರ ಅವರನ್ನು ಚಿತ್ರದಿಂದ ತೆಗೆದುಹಾಕಲಾಗಿದೆ ಎನ್ನಲಾಗಿದೆ. ಏಕೆಂದರೆ ಈ ಚಿತ್ರಕ್ಕೆ ಮುಗ್ಧ ಮುಖದ ಹುಡುಗಿ ಬೇಕು. ಆದರೆ ತೃಪ್ತಿ ಡಿಮ್ರಿ ಇದಕ್ಕೆ ಸೂಟ್ ಆಗುವುದಿಲ್ಲ. ಅವರ ಮುಖದಲ್ಲಿ ಮುಗ್ಧತೆ ಇಲ್ಲ ಎಂದು ಚಿತ್ರ ತಂಡ ಹೇಳಿದೆ. ಅನಿಮಲ್ ಚಿತ್ರದ ಬಳಿಕ ಅವರಲ್ಲಿ ಯಾವುದೇ ಮುಗ್ಧತೆ ಉಳಿಸಿಕೊಂಡಿಲ್ಲ ಎನ್ನುವ ಅರ್ಥದಲ್ಲಿ ಈ ಹೇಳಿಕೆ ನೀಡಲಾಗಿದೆ ಎಂದೇ ವಿಶ್ಲೇಷಿಸಲಾಗುತ್ತಿದೆ.

ಆಶಿಕಿ 3 ರ ನಾಯಕಿಯಾಗಲು ಮೂಲಭೂತ ಅವಶ್ಯಕತೆಯೇ ಮುಗ್ಧತೆ. ಈ ಚಿತ್ರದಲ್ಲಿ ನಾಯಕಿಯ ಪಾತ್ರ ಮುಗ್ಧತೆಯನ್ನು ಪ್ರತಿಬಿಂಬಿಸುತ್ತದೆ. ಆದರೆ ತೃಪ್ತಿ ಡಿಮ್ರಿ ರೋಮ್ಯಾಂಟಿಕ್ ಚಿತ್ರದಲ್ಲಿ ನಟಿಸಲು ಧೈರ್ಯಶಾಲಿಯಾಗಿದ್ದಾರೆ, ಆದರೆ ಆಶಿಕಿ ಚಿತ್ರದಲ್ಲಿ ಶುದ್ಧತೆಯ ಮುಖ ಚೆಹರೆ ಇರುವ ನಾಯಕಿ ಬೇಕು. ಈ ಚಿತ್ರವು ಪೌರಾಣಿಕ, ಭಾವಪೂರ್ಣ ಪ್ರೇಮಕಥೆಯಾಗಿದ್ದು, ತೃಪ್ತಿ ಯಾವುದೇ ರೀತಿಯಲ್ಲಿ ಹೊಂದಾಣಿಕೆ ಆಗುವುದಿಲ್ಲ ಎಂದು ಚಿತ್ರತಂಡ ಹೇಳಿದೆ ಎಂದು ವರದಿಯಾಗಿದೆ.

ಇನ್ನು ನಟಿಯ ಚಿತ್ರಗಳ ಕುರಿತು ಹೇಳುವುದಾದರೆ, ಇತ್ತೀಚೆಗೆ, ಅನೀಸ್ ಬಾಜ್ಮಿ ನಿರ್ದೇಶಿಸಿದ ಬಹು ನಿರೀಕ್ಷಿತ ಭೂಲ್ ಭುಲೈಯಾ 3 ಸೇರಿದಂತೆ ಇನ್ನು ಕೆಲವು ಚಿತ್ರಗಳಿಗಾಗಿ ತೃಪ್ತಿ ಗಮನ ಸೆಳೆದಿದ್ದಾರೆ, ಈ ಚಿತ್ರದಲ್ಲಿ ಇವರು ಕಾರ್ತಿಕ್ ಆರ್ಯನ್ ಜೊತೆಗೆ ನಟಿಸಿದ್ದಾರೆ. ಇದು 1990 ರ ದಶಕದ ಕಥೆ ಆಧರಿಸಿರುವ ವಿಕ್ಕಿ ವಿದ್ಯಾ ಕಾ ವೋ ವಾಲಾ ವಿಡಿಯೋ ಚಿತ್ರದಲ್ಲಿ ಅವರು ಋಷಿಕೇಶದ ವಿದ್ಯಾ ಎಂಬ ಸಣ್ಣ-ಪಟ್ಟಣದ ಹುಡುಗಿಯಾಗಿ ನಟಿಸಿದ್ದಾರೆ

ಟ್ರೈಲರ್ ಈಗಾಗಲೇ 90 ರ ದಶಕದ ವೈಬ್ ಮತ್ತು ಹಾಸ್ಯಮಯ ಒಳನೋಟಗಳೊಂದಿಗೆ ಪ್ರೇಕ್ಷಕರ ಗಮನವನ್ನು ಸೆಳೆದಿದೆ. ರಾಜ್‌ಕುಮಾರ್ ರಾವ್ ಅವರನ್ನೂ ಒಳಗೊಂಡಿರುವ ಈ ಚಿತ್ರವು ಒಂದು ಟ್ವಿಸ್ಟ್‌ನೊಂದಿಗೆ ಕ್ಲಾಸಿಕ್ ಪ್ರೇಮಕಥೆಯನ್ನು ರಿಫ್ರೆಶ್ ಮಾಡುವ ಭರವಸೆ ನೀಡುತ್ತದೆ.

ಇನ್ನು ವಿಕ್ಕಿ ಕೌಶಲ್ ಅವರು, ಲಕ್ಷ್ಮಣ್ ಉಟೇಕರ್ ಅವರ ಛಾವಾದಲ್ಲಿ ನಟಿಸಲು ಸಿದ್ಧರಾಗಿದ್ದಾರೆ, ಅಲ್ಲಿ ಅವರು ಮರಾಠ ದೊರೆ ಮತ್ತು ಛತ್ರಪತಿ ಶಿವಾಜಿಯ ಮಗ ಸಂಭಾಜಿಯ ಪಾತ್ರ ಮಾಡುತ್ತಿದ್ದಾರೆ.



# ಹೊಸ ತಾಳಿಯೊಂದಿಗೆ ಮಿಂಚುತ್ತಿರುವ ಕೀರ್ತಿಸುರೇಶ್

ದಕ್ಷಿಣ ಭಾರತದ ನಟಿ ಕೀರ್ತಿ ಸುರೇಶ್, ಕಳೆದ ತಿಂಗಳು ತಮ್ಮ ದೀರ್ಘಕಾಲದ ಗೆಳೆಯ ಆಂಟನಿ ಥಟ್ಟಿಲ್ ಅವರನ್ನು ವಿವಾಹವಾದರು.

ಸುಮಾರು 15 ವರ್ಷಗಳ ಕಾಲ ಪ್ರೀತಿಸಿದ ಇವರಿಬ್ಬರೂ, ಆರಂಭದಲ್ಲಿ ಬೇರೆ ಬೇರೆ ಧರ್ಮಕ್ಕೆ ಸೇರಿದವರು ಎಂಬ ಕಾರಣಕ್ಕೆ ಕೀರ್ತಿಯವರ ಪೋಷಕರು ಮದುವೆಗೆ ಒಪ್ಪಿರಲಿಲ್ಲ. ಆದರೆ ಹಲವು ಹಂತದ ಹೋರಾಟಗಳ ನಂತರ ಕೀರ್ತಿ ಸುರೇಶ್, ಪೋಷಕರ ಅನುಮತಿ ಪಡೆದು ನಂತರ ಯಶಸ್ವಿಯಾಗಿ ತಮ್ಮ ಪ್ರಿಯಕರನನ್ನು ಮದುವೆಯಾದರು.

ಕೀರ್ತಿ ಸುರೇಶ್ ಅವರ ಮದುವೆ ಗೋವಾದಲ್ಲಿ ನಡೆದಿದ್ದು, ಇದರಲ್ಲಿ ಹಲವಾರು ಗಣ್ಯರು ಭಾಗವಹಿಸಿ ಶುಭ ಹಾರೈಸಿದ್ದಾರೆ. ನಟ ವಿಜಯ್, ಕೀರ್ತಿ ಸುರೇಶ್ - ಆಂಟನಿ ಥಟ್ಟಿಲ್ ಮದುವೆಯಲ್ಲಿ ನೇರವಾಗಿ ಭಾಗವಹಿಸಿದರು.

ಅದೇ ರೀತಿ ತ್ರಿಷಾ, ಮಾಳವಿಕಾ ಮೋಹನನ್, ನಿರ್ದೇಶಕ ಮಾರಿ ಸೆಲ್ವರಾಜ್ ಸೇರಿದಂತೆ ಹಲವರು ಭಾಗವಹಿಸಿದ್ದರು. ಕೀರ್ತಿಯವರ ಕುಟುಂಬದ ಪದ್ಧತಿಯಂತೆ ಹಿಂದೂ ಸಂಪ್ರದಾಯದಂತೆಯೂ, ಆಂಟನಿ ಥಟ್ಟಿಲ್ ಕುಟುಂಬದ ಪದ್ಧತಿಯಂತೆ ಕ್ರಿಶ್ಚಿಯನ್ ಸಂಪ್ರದಾಯದಂತೆಯೂ ಇವರಿಗೆ ಮದುವೆ ನಡೆಯಿತು.

ಮದುವೆಯಾದ ಕೂಡಲೇ, ಕೀರ್ತಿ ಸುರೇಶ್ ಬಾಲಿವುಡ್ ಚಿತ್ರ 'ಬೇಬಿ' ಜಾನ್ ಚಿತ್ರದ ಪ್ರಚಾರ ಕಾರ್ಯಗಳಲ್ಲಿ ಭಾಗವಹಿಸಿದರು.

ದುಬೈಗೆ ಪ್ರಚಾರಕ್ಕಾಗಿ ಹೋದಾಗ, ಕೀರ್ತಿ ಸುರೇಶ್



ತೆಗೆದುಕೊಂಡ ಫೋಟೋಗಳನ್ನು ಈಗ ಸಾಮಾಜಿಕ ಜಾಲತಾಣದಲ್ಲಿ ಹಂಚಿಕೊಂಡಿದ್ದಾರೆ. ಕಪ್ಪು ಬಣ್ಣದ ಚಿಕ್ಕ ಡ್ರೆಸ್ ಧರಿಸಿ, ಹೊಸ ತಾಳಿಯೊಂದಿಗೆ ತುಂಬಾ ಮುದ್ದಾಗಿ ಕಾಣುತ್ತಿದ್ದಾರೆ ಕೀರ್ತಿ ಸುರೇಶ್.

ತಮ್ಮ ಚಿತ್ರಗಳ ಕೆಲಸವನ್ನು ಯಶಸ್ವಿಯಾಗಿ ಮುಗಿಸಿದ ಕೀರ್ತಿ ಸುರೇಶ್, ಪತಿಯೊಂದಿಗೆ ಥೈಲ್ಯಾಂಡ್‌ನಲ್ಲಿ ಹನಿಮೂನ್ ಆಚರಿಸುತ್ತಿದ್ದಾರೆ. ಇತ್ತೀಚೆಗೆ ಅವರು ಬಿಡುಗಡೆ ಮಾಡಿದ ಫೋಟೋಗಳು ವೈರಲ್ ಆಗಿದ್ದವು. ಇದರ ನಂತರ ಈಗ ದುಬೈ ನೆನಪುಗಳನ್ನು ಮೆಲುಕು ಹಾಕುವಂತೆ ಈ ಫೋಟೋಗಳನ್ನು ಹಂಚಿಕೊಂಡಿದ್ದಾರೆ. ಮದುವೆಯ ನಂತರ ಕೀರ್ತಿ ಸುರೇಶ್ ಚಿತ್ರರಂಗದಿಂದ ದೂರ ಸರಿಯಲಿದ್ದಾರೆ ಎಂಬ ಸುದ್ದಿ ಹರಿದಾಡುತ್ತಿದ್ದು, ಇಲ್ಲಿಯವರೆಗೆ ಅಧಿಕೃತವಾಗಿ ಕೀರ್ತಿ ಸುರೇಶ್ ಯಾವುದೇ ಮಾಹಿತಿ ನೀಡಿಲ್ಲ ಎಂಬುದು ಗಮನಾರ್ಹ.

ಪ್ರಕಾಶಕ- ಸಂಪಾದಕ ಹಾಗೂ ಮಾಲೀಕ ಲಕ್ಷ್ಮೀಪ್ರಸನ್ನ ಆರ್.ಹೆಚ್. ಅವರಿಂದ #1652/6, 20ನೇ ತಿರುವು, 8ನೇ ಮುಖ್ಯರಸ್ತೆ, ಸಿ ಬ್ಲಾಕ್, ಸಹಕಾರ ನಗರ, ಬೆಂಗಳೂರು-560092 ಇಲ್ಲಿ ಪ್ರಕಟಗೊಂಡು, ಮುದ್ರಣ: ಪಿ.ಎನ್.ಪ್ರಿಂಟರ್ಸ್, ನರಸಿಪಾಳ್ಯ, ಅರಿಶಿಣಕುಂಟೆ(ಪೋ.), ನೆಲಮಂಗಲ, ಬೆಂಗಳೂರು-562123 ಇಲ್ಲಿ ಮುದ್ರಿಸಲ್ಪಟ್ಟಿದೆ. RNI.KAR/KAN/2009/31934, ದೂರವಾಣಿ: 9448074878
Edited, Published and Owned by Laxmiprasanna R.H, #1652/6, 20th Cross, 8th Main, C Block, SahakarNagar, Bangalore-560092. Printed by P N Printers, Narasipalya, Arishinakunte(Post), Kasaba(hobali), Nelamangala, Bengaluru-562123
RNI.KAR/KAN/2009/31934.VOLUME-16/ISSUE-46 Email-mussanje2010@gmail.com, Phone: 9448074878